ಸಂಪಾದಕರು: ರವಿಕುಮಾರ್ ಸಿ.ಹೆಚ್.
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ
# ಸೂರ್ಯ ಪ್ರಗತಿ
SURYAPRAGATHI Kannada Daily
ಪ್ರತಿ ಸುದ್ದಿಯ ಧ್ವನಿ
suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 Issue:25
ಸಂಪುಟ: 05 ಸಂಚಿಕೆ: 25
Date: 31-01-2026 Saturday
RNI NO : KARKAN/2021/80805 L2/RNP-1285/TMR/2025-27
Page :4 ಪುಟ : 4
Price: 1.00 ಬೆಲೆ: 1.00 ರೂ

## ಮಾನಂಗಿಗೆ ಕುಡಿಯುವ ನೀರು ಸರಬರಾಜಿಗೆ ಡಿ.ಸಿ. ಸೂಚನೆ



ತುಮಕೂರು: ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅವರು ಶುಕ್ರವಾರ ಬೆಳಿಗ್ಗೆ ಶಿರಾ ತಾಲೂಕು ಭುವನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾನಂಗಿ ಗ್ರಾಮಕ್ಕೆ ಭೇಟಿ ನೀಡಿ ತುರ್ತಾಗಿ ಕುಡಿಯುವ ನೀರು ಸರಬರಾಜು ಮಾಡಲು ಸೂಕ್ತ ಕ್ರಮವಹಿಸುವಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಭೇಟಿ ಸಮಯದಲ್ಲಿ ಪ್ರಸ್ತುತ ಮಾನಂಗಿ ಗ್ರಾಮದ ಕುಡಿಯುವ ನೀರು ಸರಬರಾಜು ಕೊಳವೆ ಬಾವಿ ವಿಫಲವಾಗಿದ್ದು, ಖಾಸಗಿ ಕೊಳವೆಬಾವಿ ಮೂಲಕ ನೀರು ಸರಬರಾಜು ಮಾಡುತ್ತಿರುವುದಾಗಿ ಗ್ರಾಮಸ್ಥರು ಮಾಹಿತಿ ನೀಡಿದರು.

ಗ್ರಾಮದ ಮನೆಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಗ್ರಾಮ ನೈರ್ಮಲ್ಯ ಕುಡಿಯುವ ನೀರು ಕುರಿತು ಚರ್ಚಿಸಿದರು ಹಾಗೂ ಗ್ರಾಮದ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ನೀಡುತ್ತಿರುವ ಬೆಳಗಿನ ಸಾಯಿ ಶೂರ್ ಮಾಲ್ಟನ್ನು ತಾವು ಖುದ್ದು ಕುಡಿದು ಗುಣಮಟ್ಟ ಪರಿಶೀಲಿಸಿದರು.

ಗ್ರಾಮಸ್ಥರು ತಮ್ಮ ಗ್ರಾಮಕ್ಕೆ ಕುಡಿಯುವ ನೀರಿನ ಘಟಕ ಮಂಜೂರು ಮಾಡಲು ಮನವಿ ಮಾಡಿದರು ಹಾಗೂ ಆಹಾರ ಇಲಾಖೆಯಿಂದ ತಮ್ಮ ಗ್ರಾಮದಲ್ಲಿರುವ ಆಹಾರ ವಿತರಣೆಗೆ ಅನುಕೂಲ ಮಾಡಿಕೊಡಲು ಕೋರಿದರು. ಈ ಕುರಿತು ತ್ವರಿತವಾಗಿ ಸೂಕ್ತ ಕ್ರಮವಹಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಮಧುಗಿರಿ ವಿಭಾಗದ ಉಪ ವಿಭಾಗಾಧಿಕಾರಿ ಗೋಟೂರು ಶಿವಪ್ಪ, ತಹಶೀಲ್ದಾರ್, ಶಿರಾ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಸಹಾಯಕ ಕಾರ್ಯ ಪಾಲಕ ಅಭಿಯಂತರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಸಿಬ್ಬಂದಿ, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರುಗಳು ಹಾಜರಿದ್ದರು.

## ಮಹನೀಯರನ್ನು ಸ್ಮರಿಸುವ ಸರ್ವೋದಯ ದಿನ ಆಚರಣೆ

ತುಮಕೂರು: ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಾಡಿಗಾಗಿ ತಮ್ಮ ತನು, ಮನ, ಧನ ಹಾಗೂ ಪ್ರಾಣ ತ್ಯಾಗ ಮಾಡಿದ ಮಹನೀಯರನ್ನು ಸ್ಮರಿಸುವ ಸರ್ವೋದಯ ದಿನವನ್ನು ಹುತಾತ್ಮರ ದಿನವನ್ನಾಗಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಂದ್ರಶೇಖರಗೌಡ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ರಾಷ್ಟ್ರಪಿತ ಮಹಾತ್ಮಗಾಂಧಿ, ಮಾಜಿ ಪ್ರಧಾನಿಗಳಾದ ಇಂದಿರಾಗಾಂಧಿ, ರಾಜೀವ್‌ಗಾಂಧಿ ಅವರ ಭಾವಚಿತ್ರಗಳಿಗೆ ಪುಷ್ಪ ನಮನ ಸಲ್ಲಿಸಿ, ಹುತಾತ್ಮರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮುಖಂಡರಾದ ಮುರುಳೀಧರ ಹಾಲಪ್ಪ,ಸರ್ವೋದಯ ದಿನದ ಹೆಸರಿನಲ್ಲಿ ಭಾರತೀಯರ ಹಕ್ಕು ಮತ್ತು ಸ್ವಾತಂತ್ರಕ್ಕಾಗಿ ಹೋರಾಟ ನಡೆಸಿದ ಮಹನೀಯರನ್ನು ಸ್ಮರಿಸುವ ಕೆಲಸವನ್ನು ಇಡೀ ದೇಶದಾದ್ಯಂತ ಆಚರಿಸ ಲಾಗುತ್ತಿದೆ. ಕಾಂಗ್ರೆಸ್ ಪಕ್ಷ ಸಹ ದೇಶಕ್ಕಾಗಿ ಮಡಿದ ನಮ್ಮ ನಾಯಕರುಗಳನ್ನು ಸ್ಮರಿಸಲು ಹುತಾತ್ಮರ ದಿನವನ್ನು ಆಚರಿಸುತ್ತಿದೆ. ಮುಂಬರುವ ಮೇ. ಅಥವಾ ಜೂನ್ ತಿಂಗಳಲ್ಲಿ ಗ್ರೇಟರ್ ಬೆಂಗಳೂರಿನ ಐದು ಪಾಲಿಕೆಗಳಿಗೆ ಚುನಾವಣೆ ನಡೆಯಲಿದೆ.



ತದನಂತರದಲ್ಲಿ ರಾಜ್ಯದ ಎಲ್ಲಾ ನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಿಗೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಯಲಿದೆ.ಹಾಗಾಗಿ ಪಕ್ಷದ ಕಾರ್ಯಕರ್ತರು ಎಚ್ಚೆತ್ತುಕೊಂಡು, ಚುನಾವಣಾ ತಯಾರಿಯಲ್ಲಿ ಭಾಗಿಯಾಗುವಂತೆ ಕೋರಿದರು.

ಮುಖಂಡರಾದ ಇಕ್ಬಾಲ್ ಅಹಮದ್ ಮಾತನಾಡಿ,ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡು, ಬ್ರಿಟಿಷರ ಕಪಿಮುಷ್ಠಿಯಿಂದ ಭಾರತೀಯರನ್ನು ಬಿಡಿಸಲು ಹೋರಾಡಿ, ತಮ್ಮ ಪ್ರಾಣಾರ್ಪಣೆ ಮಾಡಿದ ಮಹನೀಯರನ್ನು ಸ್ಮರಿಸುವುದು ಸರ್ವೋದಯ ದಿನದ ಉದ್ದೇಶ. ಕಾಂಗ್ರೆಸ್ ಪಕ್ಷಕ್ಕೆ ಸರ್ವೋದಯ ದಿನ ಆಚರಿಸಲು ಹೆಚ್ಚಿನ ಅರ್ಹತೆ ಇದೆ.ಕಾಂಗ್ರೆಸ್ ಪಕ್ಷದ ಸಾವಿರಾರು ಕಾರ್ಯಕರ್ತರು, ಮುಖಂಡರು ಸ್ವಾತಂತ್ರಕ್ಕಾಗಿ ತಮ್ಮ ಪ್ರಾಣವನ್ನು ತ್ಯೇಜಿಸಿದ್ದಾರೆ.ತಮ್ಮ ಪ್ರಾಣಕ್ಕಿಂತ ದೇಶದ ರಕ್ಷಣೆ ಮುಖ್ಯ ಎಂಬುದನ್ನು ಇಂದಿರಾಗಾಂಧಿ ಅಪರೇಷನ್ ಬ್ಲೂ ಸ್ಟಾರ್ ಮೂಲಕ,ಶ್ರೀಲಂಕಕ್ಕೆ ಭಾರತೀಯ ಶಾಂತಿ ಪಾಲನಾ ಪಡೆಯನ್ನು ಕಳುಹಿಸುವ ಮೂಲಕ ರಾಜೀವಗಾಂಧಿ ಅವರುಗಳು ತೋರಿಸಿಕೊಟ್ಟಿದ್ದಾರೆ.ಇವರ ಆದರ್ಶಗಳು ಕಾಂಗ್ರೆಸ್ ಕಾರ್ಯಕರ್ತರಿಗೆ ಮಾದರಿಯಾಗಬೇಕು.ನಾವುಗಳು ಮೇಲ್ನೋಟಕ್ಕೆ ಕಾಂಗ್ರೆಸ್ ಕಾರ್ಯಕರ್ತರಾಗದೆ, ಮನಸ್ಸಿನಿಂದ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಬೇಕೆಂದರು.ಮುಖಂಡರಾದ ಕೆಂಚಮಾರಯ್ಯ ಮಾತನಾಡಿ,ಮಹಾತ್ಮಗಾಂಧಿ ಅವರು ಸಾವನ್ನಪ್ಪಿದ ದಿನವನ್ನು ಸರ್ವೋದಯ ದಿನವನ್ನಾಗಿ ಆಚರಿಸಲಾಗುತ್ತಿದೆ.ಆದರೆ ಬಿಜೆಪಿ ಮತ್ತು ಅದರ ಅಂಗ ಸಂಸ್ಥೆಗಳಿಗೆ ಗಾಂಧಿಜಿಯ ಬಗ್ಗೆ ಮೊದಲಿನಿಂದಲೂ ದ್ವೇಷವಿದೆ.ಗಾಂಧಿ ಕೊಂದ ಗೂಡ್ಸೆ ನೀಡಿದ ಕಾರಣ, ದೇಶವಿಭಜನೆಗೆ ಸಹಕಾರ, ಅಸ್ಪೃಷ್ಯತೆ ನಿವಾರಣೆಗೆ ಪ್ರಯತ್ನ. ಗಾಂಧೀಜಿ ಅವರಿಗೆ ಕವಿ ರವೀಂದ್ರನಾಥ ಟ್ಯಾಗೋರ್ ನೀಡಿದ ಬಿರುದು ಮಹಾತ್ಮ, ಹಾಗೆಯೇ ಸುಭಾಷ್ ಚಂದ್ರ ಬೋಸ್ ನೀಡಿದ ಬಿರುದು ರಾಷ್ಟ್ರಪಿತ. ಅಂತಹ ಗಾಂಧಿಯ ಹೆಸರನ್ನು ಅಳಿಸಿ ಹಾಕುವ ನಿರಂತರ ಪ್ರಯತ್ನದಲ್ಲಿ ಬಿಜೆಪಿ ತೊಡಗಿದೆ. ಆದರೆ ಕಾಂಗ್ರೆಸ್ ಪಕ್ಷ ಕರ್ನಾಟಕದ ಪ್ರತಿ ಗ್ರಾ.ಪಂ.ಗೂ ಗ್ರಾಮ ಸ್ವರಾಜ್ ಪರಿಕಲ್ಪನೆ ನೀಡಿದ ಮಹಾತ್ಮಗಾಂಧಿ ಹೆಸರನ್ನು ಇಡಲು ಮುಂದಾಗಿದೆ. ಗಾಂಧಿ ಹೆಸರು ಹೇಳುವ ನೈತಿಕತೆಯೂ ಬಿಜೆಪಿಗರಿಗೆ ಇಲ್ಲ ಎಂದರು.ಅಧ್ಯಕ್ಷೀಯ ನುಡಿಗಳನ್ನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ,ಸ್ವಾತಂತ್ರಕ್ಕಾಗಿ ತಮ್ಮ ಪ್ರಾಣ ತ್ಯಾಗ ಮಾಡಿದ ಮಹಾತ್ಮಗಾಂಧಿ,ಅರವಿಂದ ಘೋಷ್,ಭಗತ್‌ಸಿಂಗ್ ಸೇರಿದಂತೆ ಹಲವರನ್ನು ಸ್ಮರಿಸುವ ದಿನವಾಗಿ ಸರ್ವೋದಯ ದಿನವನ್ನು ಆಚರಿಸುತ್ತಿದ್ದೇವೆ.ಹಂತಕರ ಗುಂಡಿಗೆ ಬಲಿಯಾದ ಎಲ್ಲರ ಆತ್ಮಕ್ಕೂ ಶಾಂತಿ ಸಿಗಲಿ ಎಂಬುದು ನಮ್ಮ ಹಾರೈಕೆಯಾಗಿದೆ. ಕಾಂಗ್ರೆಸ್ ಗಾಂಧಿ ಹೆಸರನ್ನು ಶಾಶ್ವತವಾಗಿಸಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿದೆ ಎಂದರು.

## ವಿಕಸಿತ ಭಾರತ 2047ರ ಸಂಕಲ್ಪಕ್ಕೆ ಸಹಕರಿಸಿ
## ಬ್ಯಾಂಕ್, ಉದ್ದಿಮೆಗಳಿಗೆ ಎಸ್.ಪಿ.ಚಿದಾನಂದ್ ಮನವಿ

ತುಮಕೂರು: ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಕನಸಿನ ವಿಕಸಿತ ಭಾರತ 2047ರ ಸದೃಢ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಬ್ಯಾಂಕುಗಳು, ಕೈಗಾರಿಕೆಗಳು ಹೆಚ್ಚು ಸಹಕಾರ ನೀಡಬೇಕು ಎಂದು ಎಸ್.ಪಿ. ಡೆವಲಪರ್ಸ್‌ನ ವ್ಯವಸ್ಥಾಪಕ ನಿರ್ದೇಶಕರೂ ಆದ ಬಿಜೆಪಿ ಮುಖಂಡ ಎಸ್.ಪಿ. ಚಿದಾನಂದ್ ಮನವಿ ಮಾಡಿದರು.

ಬುಧವಾರ ನಗರದ ಗಾಂಧಿನಗರದಲ್ಲಿ ತಮಿಳುನಾಡು ಮರ್ಕೆಂಟೈಲ್ ಬ್ಯಾಂಕ್ ಶಾಖೆ ಉದ್ಘಾಟಿಸಿ ನಂತರ ನಡೆದ ಸಮಾರಂಭದಲ್ಲಿ ಮಾತನಾಡಿದ ಅವರು, ಭಾರತ ದೇಶ ಆರ್ಥಿಕವಾಗಿ ಶಕ್ತಿಯುತವಾಗಿ ಬೆಳೆಯಲು ಹಣಕಾಸು ಸಂಸ್ಥೆಗಳು, ಉದ್ದಿಮೆಗಳು ಸಮರ್ಥವಾಗಿ ವಹಿವಾಟು ನಡೆಸಬೇಕು. ಉತ್ಪಾದನಾ ಪ್ರಮಾಣ ಹೆಚ್ಚಿಸಿಕೊಳ್ಳಬೇಕು ಎಂದು ಹೇಳಿದರು.

ಬ್ಯಾಂಕ್‌ಗಳು ಕೇವಲ ಠೇವಣಿದಾರರಿಂದ ಬೆಳವಣಿಗೆಯಾಗುವುದಿಲ್ಲ, ಸಾಲ ಪಡೆದು ಸಕಾಲದಲ್ಲಿ ಬಡ್ಡಿ ಸಮೇತ ಸಾಲ ಮರುಪಾವತಿ ಮಾಡುವ ಸಾಲಗಾರರೂ ಪ್ರಮುಖ ಕಾರಣರಾಗುತ್ತಾರೆ. ಠೇವಣಿದಾರರಿಗೆ ಕೊಡುವ ಗೌರವವನ್ನು ಸಾಲಗಾರರಿಗೂ ಬ್ಯಾಂಕ್‌ಗಳು ಕೊಡಬೇಕು. ಸಾಲಗಾರರು ಒಂದು ತಿಂಗಳು ಸಾಲದ ಬಾಬ್ತು ಪಾವತಿ ಮಾಡಲು ಸಾಧ್ಯವಾಗದಿದ್ದಾಗ ಅವರ ಪರಿಸ್ಥಿತಿ ಅರ್ಥಮಾಡಿಕೊಂಡು ಆತ್ಮವಿಶ್ವಾಸ ಮೂಡಿಸಿ ಅವಕಾಶ ನೀಡಬೇಕು ಎಂದರು.



ಆರ್ಥಿಕ ವ್ಯವಹಾರದ 'ಸಿವಿಲ್' ಬಗ್ಗೆ ಗ್ರಾಹಕರಿಗೆ ಹಾಗೂ ಯುವಜನರಿಗೆ ಸರಿಯಾದ ಮಾಹಿತಿ ನೀಡಿ ಅವರನ್ನು ವೃತ್ತಿಪರರನ್ನಾಗಿ ಮಾಡುವ ಪ್ರಯತ್ನವನ್ನು ಬ್ಯಾಂಕುಗಳು ಮಾಡಬೇಕು. ಬ್ಯಾಂಕಿಂಗ್ ವ್ಯವಹಾರದಲ್ಲಿ ಎರಡು ರೀತಿಯ ಗ್ರಾಹಕರನ್ನು ಕಾಣಬಹುದು. ಠೇವಣಿ ಇಟ್ಟು ಅದರ ಬಡ್ಡಿ ಪಡೆಯುವವರು, ಮತ್ತೊಂದು ವರ್ಗ ಸಾಲ ಪಡೆದು ಬಂಡವಾಳ ಹೂಡಿ ಶ್ರಮವಹಿಸಿ ದುಡಿದು ಹೆಚ್ಚು ಲಾಭ ಮಾಡುವವರು. ಈ ಎರಡೂ ವರ್ಗವನ್ನು ಬ್ಯಾಂಕ್‌ಗಳು ಆಧರಿಸಬೇಕು ಎಂದು ಎಸ್.ಪಿ.ಚಿದಾನಂದ್ ಹೇಳಿದರು.

ಉದ್ಯಮಿಗಳಾದ ಪ್ರದೀಪ್‌ಕುಮಾರ್ ಸೋಲಂಕಿ, ಭಾರತಿ ಸೋಲಂಕಿ, ಸಿದ್ಧಲಿಂಗಯ್ಯ,ಟಿ.ಜಗದೀಶ್ ಚಂದ್ರಬೋಸ್, ತಮಿಳುನಾಡು ಮರ್ಕೆಂಟೈಲ್ ಬ್ಯಾಂಕಿನ ಬೆಂಗಳೂರು ವಲಯ ಮುಖ್ಯಸ್ಥ ಆರ್.ಸರವಣ ರಾಜನ್, ತುಮಕೂರು ಶಾಖೆ ಮುಖ್ಯಸ್ಥ ಆರ್.ಕಾತಿರೇಸನ್ ಮೊದಲಾದವರು ಭಾಗವಹಿಸಿದ್ದರು.

## ನಿರುವಗಲ್ ಶ್ರೀ ಮಾರಮ್ಮ ದೇವಸ್ಥಾನ ಲೋಕಾರ್ಪಣೆ

ಹುಳಿಯಾರು: ಹುಳಿಯಾರು ಸಮೀಪದ ನಿರುವಗಲ್ ಗ್ರಾಮದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಶ್ರೀ ಮಾರಮ್ಮ ದೇವಿಯವರ ದೇವಸ್ಥಾನದ ಲೋಕಾರ್ಪಣೆ ಹಾಗೂ ಸ್ಥಿರಬಿಂಬ ಪ್ರತಿಷ್ಠಾನ ಮಹೋತ್ಸವ ಕಾರ್ಯಕ್ರಮವು, ಧಾರ್ಮಿಕ ವಿಧಿವಿಧಾನಗಳೊಂದಿಗೆ ವಿಜೃಂಭಣೆಯಿಂದ ನಡೆಯಿತು.

ಗೋದೋಳಿ ಲಗ್ನದಲ್ಲಿ ಗ್ರಾಮದ ಭಕ್ತರ ಸಮೂಹದಲ್ಲಿ ಪುಣ್ಯತೀರ್ಥ, ಸಂಗ್ರಹಣೆ ಗಂಗಾರತಿ, ಏಕೋತ್ತಾರ ಶತಕುಂಬ ಮಹೋತ್ಸವವನ್ನು ಶ್ರೀ ಆಂಜನೇಯ ಸ್ವಾಮಿ, ಶ್ರೀ ದುರ್ಗಮ್ಮ ದೇವಿ, ಭೂತಪ್ಪ ಸ್ವಾಮಿ, ಬೆಳಗುಲಿ ಶ್ರೀ ದುರ್ಗಮ್ಮ ಮತ್ತು ಮೇಲೆನಹಳ್ಳಿ ಶ್ರೀ ದುರ್ಗಮ್ಮ ದೇವರುಗಳ ಆಗಮನದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳ ವಾದ್ಯದೊಂದಿಗೆ, ಶ್ರೀ ಮಾರಮ್ಮ ದೇವಿಯ ದೇವಾಲಯ ಪ್ರವೇಶ ನಂತರ ಗಂಗಾ, ಗಣಪತಿ ಸ್ವಸ್ತವಾನಮ್, ವಾಸ್ತು ಹೋಮ, ಮಹಾಗಣಪತಿ ಹೋಮ, ಅಂಕುರ, ಕಳಶರಾದನ, ನವಗ್ರಹ



ಮೃತ್ಯುಂಜಯ ಹೋಮ, ನ್ಯಾಸ ಪೂಜಾ, ಪುಷ್ಪ ದಿವಸ,ವಸ್ತ್ರಾ ದಿವಸ, ಮಂಗಳಾರತಿ, ಪ್ರತಿಷ್ಠಾಪನೆಯ ಮುಂತಾದ ಪೂಜಾ ಸೇವಾ ಕೈಂಕರ್ಯಗಳು ನಡೆದವು.

ಬೆಳಿಗ್ಗೆ, ಶುಭ ಬ್ರಾಹ್ಮಿ ಮುಹೂರ್ತದಲ್ಲಿ ಗಂಗಾ ಪೂಜೆಯೊಂದಿಗೆ, ದೇವರ ಕಳಸ ತಂದು ಗ್ರಾಮದ ಪ್ರಮುಖ ಬೀದಿಗಳಲ್ಲಿ ಜನಪದ ಕಲಾ ತಂಡಗಳ ಮೆರವಣಿಗೆ ಮೂಲಕ ಶ್ರೀ ಮಾರಮ್ಮ ದೇವಿಯ ವಿಗ್ರಹವನ್ನು ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು. ಶ್ರೀ ಮಾರಮ್ಮ ದೇವಿಯವರ ಅಷ್ಟ ಬಂದ ಕ್ರಿಯೆ, ಪ್ರಾಣ ಪ್ರತಿಷ್ಠೆ, ಕ್ಷೀರಾಭಿಷೇಕ, ಅಲಂಕಾರ ಮಹಾ ದುರ್ಗ ಹೋಮ, ಕಾಳ ಹೋಮ, ದೃಷ್ಟಿ ಪೂಜೆ, ನೇತ್ರೋಮಿಲನ, ನಾಮಕರಣ ಮಹಾಪುರುಷ ಮಂತ್ರಾಕ್ಷತೆ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಮುಂತಾದ ಧಾರ್ಮಿಕ ಸೇವಾ ಕೈಂಕರ್ಯಗಳು ನಡೆದವು.

ನೂತನ ದೇವಾಲಯ ಮತ್ತು ಶ್ರೀ ಮಾರಮ್ಮ ದೇವಿಯವರಿಗೆ ವಿಶೇಷ ಹೂವಿನ ಅಲಂಕಾರವನ್ನು ಮಾಡಲಾಗಿತ್ತು. ದೇವಸ್ಥಾನದ ಪ್ರಾರಂಭೋತ್ಸವಕ್ಕೆ ಭಾಗಿಯಾದ ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ಅನ್ನದಾಸೋಹ ವ್ಯವಸ್ಥೆ ಕಲ್ಪಿಸಲಾಗಿತ್ತು. ನಿರುವಗಲ್ ಗ್ರಾಮದ ಜೈ ಭೀಮ್ ಗೆಳೆಯರ ಬಳಗದ ವತಿಯಿಂದ ತುಮಕೂರಿನ ಜ್ಯೋತಿ ಮೆಲೋಡಿಸ್ ಆರ್ಕೆಸ್ಟ್ರಾ ತಂಡದ ವತಿಯಿಂದ ರಸಮಂಜರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಾಸಕ ಸಿ.ಬಿ.ಸುರೇಶ್ ಬಾಬು ಸೇರಿದಂತೆ ಮುಖಂಡರುಗಳು, ಗ್ರಾಮಸ್ಥರು ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

## ವಿವಿಧ ತರಬೇತಿಗಾಗಿ ಅರ್ಜಿ ಆಹ್ವಾನ

ತುಮಕೂರು: ತುಮಕೂರು ಜಿಲ್ಲೆಯಲ್ಲಿ ಸ್ವಂತ ಉದ್ದಿಮೆಯನ್ನು ಸ್ಥಾಪಿಸುವ ಆಸಕ್ತ ಯುವಕ ಹಾಗೂ ಯುವತಿಯರಿಗೆ 30 ದಿನಗಳ ಉಚಿತ ಕೌಶಲ್ಯಾ ಆಧಾರಿತ ಬ್ಯೂಟಿಷಿಯನ್ ಕೋರ್ಸ್ ಹಾಗೂ ಡೆಸ್ಕ್ಟಾಪ್ ಪಬ್ಲಿಷಿಂಗ್ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿ ಪಡೆಯಲಿಚ್ಛಿಸುವವರು ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿದ್ದು, 35 ವರ್ಷ ವಯೋಮಾನದವರಾಗಿರಬೇಕು. ಪ.ಜಾತಿ, ಪ.ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಆದ್ಯತೆ ನೀಡಲಾಗುವುದು. ಆಸಕ್ತರು ಭರ್ತಿ ಮಾಡಿದ ಅರ್ಜಿಯನ್ನು ಜನವರಿ 30ರೊಳಗಾಗಿ ಜಂಟಿ ನಿರ್ದೇಶಕರ ಕಚೇರಿ, ಜಿಲ್ಲಾ ಕೈಗಾರಿಕ ಕೇಂದ್ರ, ರಿಸರ್ವ್ ಪೊಲೀಸ್ ಮೈದಾನದ ಎದುರು, ಎಸ್.ಐ.ಟಿ. ಬಸ್ ನಿಲ್ದಾಣ, ತುಮಕೂರು ಇವರಿಗೆ ಸಲ್ಲಿಸಬೇಕು ಅಥವಾ ದೂ.ವಾ.ಸಂ. 7022746755ಕ್ಕೆ ಕರೆ ಮಾಡಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ತರೂರು: ಯುವಜನ ಗ್ರಾಮ ಸಭೆ

ಶಿರಾ: ನಮ್ಮ ರಾಜ್ಯದಲ್ಲಿ ಒಟ್ಟು 7 ಕೋಟಿಗೂ ಹೆಚ್ಚು ಜನರಿದ್ದು ಅದರಲ್ಲಿ 2 ಕೋಟಿ 10 ಲಕ್ಷಕ್ಕೂ ಹೆಚ್ಚು ಯುವಜನರು ಇದ್ದು ಅದರಲ್ಲಿ 67% ಯುವಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಅವರ ಸಮಸ್ಯೆಗಳು, ಸವಾಲುಗಳನ್ನು ಅರ್ಥಮಾಡಿಕೊಂಡು ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಕರ್ನಾಟಕ ಸರ್ಕಾರ ಪಂಚಾಯತ್ ರಾಜ್ ಇಲಾಖೆ ಯುವಜನ ಗ್ರಾಮ ಸಭೆ ಮಾಡಲು ಸೂಚಿಸಿರುವುದು ಶ್ಲಾಘನೀಯವಾದುದ್ದು ಎಂದು ನವ್ಯದಿಶ ಸಂಸ್ಥೆಯ ಪ್ರೋಗ್ರಾಂ ಕೋರ್ಡಿನೇಟರ್ ಜನಾರ್ಧನ ಜೆ, ಎಸ್ ಅಭಿಪ್ರಾಯ ಪಟ್ಟರು.

ಇವರು ತರೂರು ಗ್ರಾಮ ಪಂಚಾಯತಿ ಮತ್ತು ನವ್ಯದಿಶ ಸಂಸ್ಥೆ ಯುವಚಾವಡಿ ಕಾರ್ಯಕ್ರಮದ ಸಹಯೋಗದೊಂದಿಗೆ ಆಯೋಜಿಸಿದ್ದ ಯುವಜನ ಗ್ರಾಮ ಸಭೆಯನ್ನು ಉದ್ದೇಶಿಸಿ ಮಾತಾಡುತ್ತಾ ಪಂಚಾಯ್ತಿ ವ್ಯಾಪ್ತಿಯಲ್ಲಿ ನಮಗೆ ಏನಾದ್ರೂ ಸಮಸ್ಯೆಗಳು ಆದರೆ ನಾವು ನೇರವಾಗಿ ರಾಜ್ಯ ಸರ್ಕಾರವನ್ನು ಕೇಳಲು ಆಗುವುದಿಲ್ಲ ಸ್ಥಳೀಯ ಸರ್ಕಾರ ಗ್ರಾಮ ಪಂಚಾಯಿತಿಯನ್ನು ಕೇಳಬೇಕು ಈ ನಿಟ್ಟಿನಲ್ಲಿ



ಯುವಜನರು ಆದ ನಿಮಗೆ ಉದ್ಯೋಗ, ಕೌಶಲ್ಯಗಳು, ಶಿಕ್ಷಣ, ವಯಕ್ತಿಕ ಸಮಸ್ಯೆಗಳು ಯಾವುದೇ ರೀತಿಯ ಸಮಸ್ಯೆಗಳು ಇದ್ದರೂ ಈ ಯುವಜನ ಗ್ರಾಮ ಸಭೆಯಲ್ಲಿ ಚರ್ಚಿಸಬಹುದು, ಪ್ರಶ್ನಿಸಿ ಉತ್ತರಗಳನ್ನು ಪಡೆದುಕೊಳ್ಳಬಹುದು ಎಂದರು.

ಪಂಚಾಯ್ತಿಯ ಅಭಿವೃದ್ಧಿ ಅಧಿಕಾರಿಗಳು ಗುರು ಪ್ರಸಾದ್ ಅವರು ಮಾತಾಡಿ ನಮ್ಮ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಅರಿವು ಕೇಂದ್ರಗಳನ್ನು ತೆರೆದಿದ್ದು ಕೌಶಲ್ಯಗಳನ್ನು ಕಲಿಯಲು ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಇದೆ ಎಂದರು, ನಿರುದ್ಯೋಗಿ ಯುವಜನರಿಗೆ ಕೆಲಸ ಮಾಡಿಕೊಳ್ಳಲು ನಾವು ನರೇಗಾ ಯೋಜನೆ ಅಡಿಯಲ್ಲಿ ಕೆಲಸ ಕೊಡುತ್ತೇವೆ, ಜಾಬ್ ಕಾರ್ಡ್ ಮಾಡಿಸಿಕೊಳ್ಳಿ ಎಂದರು ಪಂಚಾಯ್ತಿ ವ್ಯಾಪ್ತಿಯಲ್ಲಿ ನಾವು ನೀವು ಒಟ್ಟಿಗೆ ಸೇರಿ ಕೆಲಸ ಮಾಡೋಣ ಈ ತರದ ಸಭೆಗಳನ್ನು ಹೆಚ್ಚೆಚ್ಚು ಮಾಡೋಣ ಎಂದರು.

ಪಂಚಾಯ್ತಿಯ ಅಧ್ಯಕ್ಷರಾದ ಪುಷ್ಪಲತ ಅವರು ಮಾತಾಡಿ ಯುವಜನರು ಹೆಚ್ಚು ದುಶ್ಚಟಗಳಿಗೆ ಬಲಿಯಾಗುತ್ತಿದ್ದು ಅದರಿಂದ ಆಚೆ ಬಂದು ಉತ್ತಮ ಬದುಕು ಕಟ್ಟಿಕೊಳ್ಳಲು ಸಲಹೆ ನೀಡಿದರು.

ಭಾಗವಹಿಸಿದ್ದ ಯುವಜನರು ಹಳ್ಳಿ ಮತ್ತು ಶಾಲೆಗೆ ಸಂಬಂಧಿಸಿದಂತೆ ಕೆಲವು ಪ್ರಶ್ನೆಗಳನ್ನು ಕೇಳಿ ಪ್ರತಿಕ್ರಿಯೆ ಪಡೆದುಕೊಂಡರು, ಒಟ್ಟು 10 ಜನ ಯುವಜನರು ಯೂತ್ ಮೆಂಟರ್ ಕಿರಣ್ ಭಾಗವಹಿಸಿದ್ದರು.

## ಎಂ.ಎನ್ ಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಕಾಂತರಾಜು ಆಯ್ಕೆ

ಎಂ ಎನ್ ಕೋಟೆ : ಗುಬ್ಬಿ ತಾಲೂಕಿನ ಎಂ ಎನ್ ಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಹಲಸಿನ ನಾಗೇನಹಳ್ಳಿ ಗ್ರಾಮದ ಕಾಂತರಾಜು ಎರಡು ಮತಗಳ ಪಡೆದು ಬುಧವಾರ ಭರ್ಜರಿ ಜಯಗಳಿಸಿದರು.

ಈ ಹಿಂದೆ ಅಧ್ಯಕ್ಷರಾಗಿದ್ದ ನರಸಯ್ಯ ಅವರ ಅವಿಶ್ವಾಸದ ಹಿನ್ನೆಲೆಯಲ್ಲಿ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಕಾಂತರಾಜು, ದಿಲೀಪ್ ಕುಮಾರ್ ಹಾಗೂ ಲೋಕೇಶ್ ಮೂರು ಜನ ನಾಮಪತ್ರವನ್ನು ಸಲ್ಲಿಸಿದರು.

ಮತ್ತಿಕೆರೆ ಗ್ರಾಮದ ಲೋಕೇಶ್ ರವರು ನಾಮಪತ್ರವನ್ನು ವಾಪಸ್ ಪಡೆದರು. ಚುನಾವಣೆ ಕಣದಲ್ಲಿ ಕಾಂತರಾಜು ಹಾಗೂ ದಿಲೀಪ್ ಕುಮಾರ್ ಇಬ್ಬರು ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣೆ ಅಧಿಕಾರಿಗಳು ಚುನಾವಣೆಯನ್ನು ನಡೆಸಿದರು.

ಕಾಂತರಾಜ್ 10 ಮತಗಳನ್ನು ಪಡೆದರೆ ಪ್ರತಿಸ್ಪರ್ಧಿ ದಿಲೀಪ್ ಕುಮಾರ್ 8 ಮತಗಳನ್ನು ಪಡೆದು ಪರಾಜಿತಗೊಂಡರು 10 ಮತಗಳನ್ನು ಪಡೆದ ಕಾಂತರಾಜ್ ಅವರು ಅಧ್ಯಕ್ಷರಾಗಿ ಆಯ್ಕೆಯಾದರು.



ಚುನಾವಣೆ ಪ್ರಕ್ರಿಯೇಯನ್ನು ಉಪ ತಹಶೀಲ್ದಾರ್ ಪ್ರಶಾಂತ್ ನಡೆಸಿಕೊಟ್ಟರು. ನೂತನ ಅಧ್ಯಕ್ಷ ಕಾಂತರಾಜು ಮಾತನಾಡಿ ನನ್ನನ್ನು ಅಧ್ಯಕ್ಷರಾಗಿ ಮಾಡಿದ ಎಲ್ಲಾ ಗ್ರಾಮ ಪಂಚಾಯತಿ ಸದಸ್ಯರಿಗೆ ಮೊದಲು ಅಭಿನಂದನೆ ಸಲ್ಲಿಸುತ್ತೇನೆ. ನಮ್ಮೆಲ್ಲಾ ಸದಸ್ಯರ ಸಹಕಾರದೊಂದಿಗೆ ಎಂಎನ್ ಕೋಟೆ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ಹಾಗೂ ಜನಪ್ರಿಯ ಶಾಸಕರಾದ ಶ್ರೀನಿವಾಸ್ ಅವರ ಸಹಕಾರ ಪಡೆದು ಅನುದಾನ ತಂದು ಎಂಎನ್ ಕೋಟೆ ಗ್ರಾಮ ಪಂಚಾಯಿತಿ ಅಭಿವೃದ್ಧಿಗೆ ಸಹಕರಿಸುತ್ತೇನೆ. ಜೊತೆಗೆ ಸರ್ಕಾರದಿಂದ ಬರುವ ಸೌಲಭ್ಯಗಳನ್ನು ರೈತರಿಗೆ ಪ್ರಾಮಾಣಿಕವಾಗಿ ತಲುಪಿಸುತ್ತೇನೆ. ರಸ್ತೆ , ಬೀದಿ ದೀಪ , ಚರಂಡಿ ಹಾಗೂ ಕುಡಿಯುವ ನೀರು ಸೇರಿದಂತೆ ಅನೇಕ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಬದನಾಗಿದ್ದು, ಗ್ರಾಮೀಣ ಭಾಗದ ಹಳ್ಳಿಗಾಡಿನ ಜನರಿಗೆ ಯಾವುದೇ ತೊಂದರೆ ಆಗದಂತೆ , ನೋಡಿಕೊಂಡು ನಮ್ಮೆಲ್ಲರ ಸದಸ್ಯರ ಸಹಕಾರದೊಂದಿಗೆ ಉತ್ತಮ ಕೆಲಸವನ್ನು ಮಾಡುತ್ತೇನೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ರುಕ್ಮಿಣಿ, ಗೋವಿಂದರಾಜು, ಸಿದ್ದಗಂಗಯ್ಯ, ಮೋಹನ್, ಕಂದಯ ಅಧಿಕಾರಿ ಮೋಹನ್ , ಹಾಗೂ ಗ್ರಾಮಸ್ಥರು ಸಿಬ್ಬಂದಿಗಳು ಉಪಸ್ಥಿತರಿದ್ದರು.

# ರಾಮನಗರ ಸುದ್ದಿ ಕಾರ್ನರ್

## ಬೆಳೆಗಳ ಸಂಸ್ಕರಣೆ, ಮೌಲ್ಯವರ್ಧನೆ ಮಾಡಿದ್ದಲ್ಲೀ ರೈತರಿಗೆ ಸುಸ್ಥಿರ ಆದಾಯ

ವರದಿ: ಮಹೇಶ್ ಬಿಡದಿ

ರಾಮನಗರ: ರೈತರು ಬೆಳೆಯುವ ಬೆಳೆಗಳ ಸಂಸ್ಕರಣೆ ಹಾಗೂ ಮೌಲ್ಯವರ್ಧನೆ ಮಾಡಿ ಉತ್ತಮ ಮಾರುಕಟ್ಟೆ ಸಂಪರ್ಕ ವ್ಯವಸ್ಥೆ ಕಲ್ಪಿಸಿದ್ದಲ್ಲೀ ಸಾಕಷ್ಟು ಉದ್ಯೋಗಾವಕಾಶಗಳು ಲಭಿಸಲಿದ್ದು, ರೈತರು ಕೂಡ ಸುಸ್ಥಿರ ಆದಾಯ ಕಂಡುಕೊಳ್ಳಲು ಸಹಕಾರಿಯಾಗಲಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರಾದ ಅಂಬಿಕಾ ಅವರು ಅಭಿಪ್ರಾಯಪಟ್ಟರು.

ಅವರು ಜ. 29ರ ಗುರುವಾರ ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕೃಷಿ ಇಲಾಖೆ ವತಿಯಿಂದ ವಿವಿಧ ಅಭಿವೃದ್ಧಿ ಇಲಾಖೆಗಳ ಯೋಜನೆಗಳ ಕುರಿತು ಕೃಷಿ ಉದ್ಯಮ ಕ್ಷೇತ್ರಕ್ಕೆ ಉತ್ತೇಜನ ನೀಡಲು ಆಯೋಜಿಸಲಾಗಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ರೈತರು ಉತ್ಪಾದಿಸುವ ಕೃಷಿ ಉತ್ಪನ್ನಗಳನ್ನು ಸಂಸ್ಕರಣೆ, ಮೌಲ್ಯವರ್ಧನೆ ಮಾಡಿದಾಗ ರೈತರಿಗೆ ಹಾಗೂ ರೈತ ಕಾರ್ಮಿಕರಿಗೆ ಹಲವಾರು ರೀತಿಯ




ಉದ್ಯೋಗಗಳು ದೊರೆಯಲಿವೆ. ರೈತರು ಪರಿವರ್ತಕರಾಗಲು ನವೀನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಬೇಕು, ಉತ್ಪಾದನಾ ವೆಚ್ಚ ಕಡಿತಗೊಳಿಸಬೇಕು ಹಾಗೂ ಪರಿಸರಕ್ಕೆ ಹಾನಿಯಾಗದಂತೆ ಕೃಷಿ ಪರಿಕರಗಳನ್ನು ಸಮರ್ಪಕವಾಗಿ ಬಳಸಿಕೊಂಡು ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಅವರು ತಿಳಿಸಿದರು.

ಜಿಲ್ಲೆಯಲ್ಲಿ ಪ್ರಮುಖವಾಗಿ ಹೈನುಗಾರಿಕೆ ಮುಂಚೂಣಿಯಲ್ಲಿದೆ, ರೈತರು ಹೈನುಗಾರಿಕೆಗೆ, ಕೃಷಿ ತೋಟಗಾರಿಕೆ, ರೇಷ್ಮೆ ಹಾಗೂ ಮೀನುಗಾರಿಕೆ ಉತ್ಪನ್ನಗಳಿಗೆ ಪ್ರಾಮುಖ್ಯತೆ ನೀಡಲು ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ರೈತರು ತಾಂತ್ರಿಕ ಮಾಹಿತಿ ಪಡೆದುಕೊಳ್ಳಲು ಈ ಕಾರ್ಯಾಗಾರವು ಸಹಕಾರಿಯಾಗಿದೆ ಎಂದರು.

ವಿಜ್ಞಾನಿಗಳಾದ ಡಾ. ಬಿ.ಬಿ. ಬೋರ್ಸೆ ಅವರು ಮಾತನಾಡಿ, ತೆಂಗು ಹಾಗೂ ಮಾವು ಬೆಳೆಗಳಿಂದ ಉತ್ಪಾದಿಸುವ ಉತ್ಪನ್ನಗಳ ಕುರಿತು, ಕೃಷಿ ಸಲಕರಣೆಗಳು ಹಾಗೂ ನವೀನ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡಿದರು.

ತೋಟಗಾರಿಕೆ, ಮೀನುಗಾರಿಕೆ, ಪಶುಪಾಲನಾ ಹಾಗೂ ರೇಷ್ಮೆ ಇಲಾಖೆಗಳಲ್ಲಿ ರೈತರಿಗೆ ದೊರಕುವ ಸೌಲಭ್ಯಗಳ ಕುರಿತು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ರೈತರಿಗೆ ಮಾಹಿತಿನೀಡಿದರು.

ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರಾದ ಮಂಜುನಾಥ್, ರೇಷ್ಮೆ ಇಲಾಖೆ ಉಪನಿರ್ದೇಶಕರಾದ ಚಂದ್ರಯ್ಯ, ಪಶುಪಾಲನಾ ಇಲಾಖೆ ಉಪನಿರ್ದೇಶಕರಾದ ಅಸಾದುಲ್ಲಾ ಶರೀಫ್, ಹಿರಿಯ ರೈತ ಮುಖಂಡರಾದ ಪುಟ್ಟಸ್ವಾಮಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಮೋಹನ್, ರೇಷ್ಮೆ ವಿಜ್ಞಾನಿಗಳಾದ ಡಾ. ಚಲುವಾಚಾರಿ, ಕೆಪೆಕ್‌ನ ಸಂಪನ್ಮೂಲ ವ್ಯಕ್ತಿ ಪನ್ನಗ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ವೇದಿಕೆಯಲ್ಲಿದ್ದರು. ಅಪಾರ ಸಂಖ್ಯೆಯಲ್ಲಿ ರೈತರು ಭಾಗವಹಿಸಿದ್ದರು.

# ಭಾರತದ ಸಂವಿಧಾನದ ಸಮಾನತೆಎತ್ತಿ ಹಿಡಿದಿರುವ 'ಲ್ಯಾಂಡ್ ಲಾರ್ಡ್' ಸಿನಿಮಾ

ತುಮಕೂರು :ಧುನಿಯಾ ವಿಜಯ್‌ಅವರ ಲ್ಯಾಂಡ್ ಲಾರ್ಡ್ ಸಿನಿಮಾ ಭಾರತದ ಸಮಾಜದಲ್ಲಿರುವಅಸಮಾನತೆಯನ್ನುತೊಲಗಿಸಲು ಭಾರತದ ಸಂವಿಧಾನದ ಸಮಾನತೆಯನ್ನು, ಈ ದೇಶದ ಸಂಸ್ಕೃತಿಯನ್ನು ವಾಸ್ತವತೆಯನ್ನುಎತ್ತಿ ಹಿಡಿದಿರುವುದರಿಂದ ಇಂದಿನ ಯುವಕರುಜಾತ್ಯತೀತವಾಗಿ ಈ ಸಿನಿಮಾವನ್ನು ನೋಡಬೇಕೆಂದುಜಾತ್ಯತೀತಯುವ ವೇದಿಕೆಯಕಾರ್ಯಾಧ್ಯಕ್ಷ ವಿರೂಪಾಕ್ಷ ಡ್ಯಾಗೇರಹಳ್ಳಿ ತಿಳಿಸಿದರು.

ಅವರುಜನವರಿ 28ರ ಸಂಜೆತುಮಕೂರಿನಎಸ್.ಮಾಲ್‌ನಲ್ಲಿ ವಿವಿಧ ಸಂಘಟನೆಗಳು ಲ್ಯಾಂಡ್ ಲಾರ್ಡ್ ಸಿನಿಮಾ ವೀಕ್ಷಣೆಯ ಮೂಲಕ ಬೆಂಬಲ ಸೂಚಿಸಿದ ಸಂದರ್ಭದಲ್ಲಿ ಮಾತನಾಡಿ, ಈ ಸಿನಿಮಾವನ್ನುಜಾತ್ಯತೀತವಾಗಿಯುವಜನರು ಪ್ರೋತ್ಸಾಹಿಸಬೇಕೆಂದು ಮಾನವಿ ಮಾಡಿದ ವಿರೂಪಾಕ್ಷ ಡ್ಯಾಗೇರಹಳ್ಳಿ, ದುನಿಯಾ ವಿಜಯ್‌ಅವರು ಈ ಸಿನಿಮಾವನ್ನು ಸವಾಲಾಗಿ ಸ್ವೀಕರಿಸಿ, ಈ ಹಿಂದೆ ನಡೆದಿರುವ ಭಾರತದ ವಾಸ್ತವವನ್ನು ಈ ಚಿತ್ರದಲ್ಲಿಎತ್ತಿ ಹಿಡಿಯಲಾಗಿದೆ, ಈ ದೇಶದ ಸಂವಿಧಾನಅಸಮಾನತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಸಿನಿಮಾ ಮೂಲಕ ತೋರಿಸಲಾಗಿದೆಜನಪರ ಮನಸ್ಸುಗಳು ಈ ಸಿನಿಮಾವನ್ನು ಪ್ರೋತ್ಸಾಹಿಸಬೇಕೆಂದು ಮನವಿ ಮಾಡಿದರು.

ಡಾ.ದರ್ಶನ್‌ಅವರು ಮಾತನಾಡಿ ಭಾರತದಇತಿಹಾಸದ ಬಗ್ಗೆ, ಅಸಮಾನತೆಯ ಬಗ್ಗೆ ಬೆಳಕನ್ನು ಚೆಲ್ಲಲಾಗಿದೆ, ಒಂದು ವಿಭಿನ್ನವಾದ ಪರಿಕಲ್ಪನೆಯನ್ನುತೋರಿಸಲಾಗಿದೆ, ಇಂತಹ ಚಿತ್ರಗಳನ್ನು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ನೋಡುವ ಮೂಲಕ ಭಾರತದಇತಿಹಾಸವನ್ನು ತಿಳಿಯಬೇಕೆಂದು ತಿಳಿಸಿದರು.

ಕೆಪಿಸಿಸಿ ಕೋ–ಆರ್ಡಿನೇಟರ್‌ಕೆ.ಎಸ್.ಗುರುಪ್ರಸಾದ್ ಮಾತನಾಡಿ, ಈ ತರಹ ಸಾಮಾಜಿಕ ಚಿತ್ರಗಳು ರಾಜಕುಮಾರ್, ವಿಷ್ಣುವರ್ಧನ್‌ಕಾಲದಲ್ಲಿಜಮೀನ್ದಾರಿ ಪದ್ದತಿಯ ಸಾಮಾಜಿಕಶೋಷಣೆಯ ಚಿತ್ರಗಳು ಬರುತ್ತಿದ್ದವು, ಇತ್ತೀಚಿನ




ದಿನಗಳಲ್ಲಿ ಅಂತ ಚಿತ್ರಗಳು ಕಣ್ಮರೆಯಾಗಿದ್ದವು, ಈಗ ದುನಿಯಾ ವಿಜಯ್‌ಅವರ ಲ್ಯಾಂಡ್ ಲಾರ್ಡ್ ಮೂಲಕ ಒಂದು ಹೆಣ್ಣು ವಿದ್ಯೆಕಲಿತರೆ, ಸಂವಿಧಾನಜಾರಿಯಿಂದಆಗಿರುವ ಸಮಾಜದ ಬದಲಾವಣೆಯನ್ನುತೋರಿಸಲಾಗಿದೆ ಈ ಹಿನ್ನಲೆಯಲ್ಲಿ ಹೆಚ್ಚು ಈ ಸಿನಿಮಾವನ್ನು ಪ್ರೋತ್ಸಾಹಿಸುವುದುಅಗತ್ಯವಿದೆಎಂದು ಹೇಳಿದರು.

ಸಾಹಿತಿ ಹಾಗೂ ವಿಮರ್ಶಕರಾದರವಿಕುಮಾರ್ ನೀಹ ಮಾತನಾಡಿ, ಸಿನಿಮಾಎಂಬುದೇಒಂದು ಪ್ರಬಲ ಮಾಧ್ಯಮ, ಪ್ರಬಲ ಮಾಧ್ಯಮ ಸಾಮಾಜಿಕ ಕಾಳಜಿಯನ್ನಿಟ್ಟುಕೊಂಡು ಈ ಕಾಲದಲ್ಲಿಇಂತಹ ಸಿನಿಮಾ ಬಂದಿರುವುದು ಬಹಳ ಮುಖ್ಯವಾದದ್ದು, ಏಕೆಂದರೆ ಶತ ಶತಮಾನಗಳಿಂದ ತುಳಿತಕ್ಕೊಳಗಾದವರಿದ್ದಾರೆ, ಜಮೀನುಇಲ್ಲದೆ ಬದುಕು ಕಟ್ಟಿಕೊಳ್ಳಲೇ ತಮ್ಮಜೀವವನ್ನುಜೀತಕ್ಕಿಟ್ಟವರಿದ್ದಾರೆ, ದೇವದಾಸಿ ಪದ್ದತಿಯಿಂದ ನರಳಿರುವವರಿದ್ದಾರೆಇಂತಹವುದಕ್ಕೆಲ್ಲಾ ಸ್ವಾಭಿಮಾನತಂದುಕೊಟ್ಟವರು ಬಾಬಾ ಸಾಹೇಬ ಅಂಬೇಡ್ಕರ್.

ಅಂತಹ ಬಾಬಾ ಸಾಹೇಬ ಅಂಬೇಡ್ಕರ್‌ಅವರಸಂವಿಧಾನವನ್ನು ಈ ಕಾಲಕ್ಕೆ ತಲುಪಿಸುವುದು ಹೇಗೆ, ಮಾಧ್ಯಮದ ಮೂಲಕ ತಲುಪಿಸುವುದು ಹೇಗೆ ಎಂಬುದುದೊಡ್ಡ ಸವಾಲಾಗಿತ್ತು, ಆದರೆ ಈಗ ದುನಿಯಾ ವಿಜಯ್ ಎಂಬ ನಟ ಲ್ಯಾಂಡ್ ಲಾರ್ಡ್ ಎಂಬ ವಸ್ತುವನ್ನುಆಯ್ದುಕೊಂಡು ಸಿನಿಮಾ ಮಾಡಿದ್ದಾರೆ,ಅವರ ಕಾಳಜಿ, ನಿದೇಶಕಜಡೇಶ್ ಹಂಪಿ ಇವರೆಲ್ಲಾ ಭೂಮಿಯ ಪ್ರಶ್ನೆಯನ್ನುಎತ್ತಿದ್ದಾರೆ, ಇವತ್ತಿಗೂ ಸಹ ಅನೇಕ ಜನರಿಗೆ ಭೂಮಿಇಲ್ಲ, ಇದರಿಂದ ಸ್ವಾಭಿಮಾನದಿಂದ ಬದಕಲು ಸಾಧ್ಯವಾಗುತ್ತಿಲ್ಲ, ಜಾತಿಎಂಬುದುಇವತ್ತಿಗೂಕೂಡಇದೆ, ಸ್ವಾಭಿಮಾನತರುವಂತಹವುದು, ಅವರಿಗೆಲ್ಲಾ ನೈತಿಕತೆಕೊಡುವಂತಹವುದು ಭೂಮಿ ಪಡೆಯಬೇಕೆಂಬುದುಅವರ




ದೊಡ್ಡಗುರಿ. ಲ್ಯಾಂಡ್ ಲಾರ್ಡ್ ಸಿನಿಮಾಇಂತಹವುದಕ್ಕೆ ಶಕ್ತಿಯಾಗಿ ಬಂದಿದೆ, ಇಂತಹ ಸಿನಿಮಾವನ್ನು ನೋಡ್ತಾರಾ ಎಂಬ ಪ್ರಶ್ನೆಯು ನಮ್ಮ ಮುಂದಿದೆ, ತಮಿಳುನಾಡಿನಲ್ಲಿ ನೋಡುತ್ತಾರೆ, ಆಂಧ್ರದಲ್ಲಿ ನೋಡ್ತಾರೆ, ಕರ್ನಾಟಕದಲ್ಲಿಇಂತಹ ವಿಷಯಎತ್ತಿಕೊಂಡು ಸಿನಿಮಾ ಮಾಡುವುದುಕಡಿಮೆಯಾಗಿತ್ತು, ಲ್ಯಾಂಡ್ ಲಾರ್ಡ್ ಮೂಲಕ ಒಂದಷ್ಟು ಹೊಸ ಮುಖಗಳು ಇಂತಹ ವಿಷಯಗಳ ಮೇಲೆ ಸಿನಿಮಾಗಳು ಬಂದರೆಜನ ಸಾಮಾನ್ಯರ ಬದುಕು, ಸಾಮಾಜಿಕ ಕಾಳಜಿಯಂತಹ ನೈತಿಕತೆ ಸಿನಿಮಾಗಳು ಬರಲುಈ ಸಿನಿಮಾ ಮುನ್ನುಡಿಯಾಗಿದೆಎಂದು ಹೇಳಿದರು.

ದಲಿತ ಹೋರಾಟಗಾರಕುಂದೂರು ಮುರಳಿ ಮಾತನಾಡಿದರು.ವಿವಧ ಸಂಘಟನೆಯ 200ಕ್ಕೂ ಜನ ಲ್ಯಾಂಡ್ ಲಾರ್ಡ್ ಸಿನಿಮಾ ವೀಕ್ಷಿಸಿದರು.

# 2050 ರ ವೇಳೆಗೆ ಭಾರತದಲ್ಲಿ 'ಬಿಸಿಲ ಬೇಗೆ' ದುಪ್ಪಟ್ಟು : ಆಕ್ಸ್'ಫರ್ಡ್ ಅಧ್ಯಯನ

2050ರ ವೇಳೆಗೆ ಭೂಮಿಯ ತಾಪಮಾನವು ದ್ವಿಗುಣಗೊಳ್ಳುವ ಸಾಧ್ಯತೆಯಿದೆ ಎಂಬ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಇತ್ತೀಚಿನ ಅಧ್ಯಯನವು ಜಾಗತಿಕ ಮಟ್ಟದಲ್ಲಿ ತಲ್ಲಣ ಮೂಡಿಸಿದೆ. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಂಶೋಧಕರು ನಡೆಸಿರುವ ಹೊಸ ಅಧ್ಯಯನವೊಂದು ಜಾಗತಿಕ ತಾಪಮಾನ ಏರಿಕೆಯ ಬಗ್ಗೆ ಗಂಭೀರ ಎಚ್ಚರಿಕೆ ನೀಡಿದೆ.

ಮುಂದಿನ ಕೆಲವು ದಶಕಗಳಲ್ಲಿ ಶತಕೋಟಿ ಜನರು ಅಪಾಯಕಾರಿ ಮಟ್ಟದ ಉಷ್ಣಾಂಶಕ್ಕೆ ತುತ್ತಾಗಲಿದ್ದಾರೆ ಎಂದು ಈ ವರದಿ ತಿಳಿಸಿದೆ. ಈ ವಿಶ್ಲೇಷಣೆಯ ಪ್ರಕಾರ, ಜಾಗತಿಕ ಸರಾಸರಿ ತಾಪಮಾನವು ಕೈಗಾರಿಕಾ ಪೂರ್ವ ಮಟ್ಟಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾದರೆ, 2050ರ ವೇಳೆಗೆ ವಿಶ್ವದ ಅರ್ಧದಷ್ಟು ಜನಸಂಖ್ಯೆ ಅಂದರೆ ಸುಮಾರು 3.79 ಶತಕೋಟಿ ಜನರು ವಿಪರೀತ ಶಾಖದ ಪರಿಸ್ಥಿತಿಯಲ್ಲಿ ಬದುಕಬೇಕಾಗುತ್ತದೆ.

ಪ್ರಮುಖ ಅಂಶಗಳು:

ಶೀಘ್ರದಲ್ಲೇ ಪರಿಣಾಮ: ಪ್ಯಾರಿಸ್ ಒಪ್ಪಂದದ 1.5 ಡಿಗ್ರಿ ಸೆಲ್ಸಿಯಸ್ ಮಿತಿಯನ್ನು ತಲುಪುವ ಮೊದಲೇ ಇದರ ತೀವ್ರ ಪರಿಣಾಮಗಳು ಕಂಡುಬರಲಿವೆ. 2010 ರಲ್ಲಿ ವಿಶ್ವದ ಶೇ. 23ರಷ್ಟು ಜನಸಂಖ್ಯೆಯ ಮೇಲೆ ಶಾಖದ ಪರಿಣಾಮವಿತ್ತು, ಆದರೆ ಶೀಘ್ರದಲ್ಲೇ ಇದು ಶೇ. 41ಕ್ಕೆ ಏರಲಿದೆ ಎಂದು 'ನೇಚರ್ ಸಸ್ಟೈನಬಿಲಿಟಿ' ಜರ್ನಲ್‌ನಲ್ಲಿ ಪ್ರಕಟವಾದ ವರದಿ ಹೇಳಿದೆ.

ಭಾರತಕ್ಕೆ ಅತಿ ಹೆಚ್ಚು ಹಾನಿ: ಬ್ರೆಜಿಲ್ ಮತ್ತು ನೈಜೀರಿಯಾದಂತಹ ದೇಶಗಳಲ್ಲಿ ಶಾಖದ ತೀವ್ರತೆ ವೇಗವಾಗಿ ಹೆಚ್ಚಾಗಲಿದೆ. ಆದರೆ, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ, ಇಂಡೋನೇಷ್ಯಾ, ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಲ್ಲಿ ಅತಿ ಹೆಚ್ಚು ಜನರು ಇದರಿಂದ ಬಾಧಿತರಾಗಲಿದ್ದಾರೆ.

ತಂಪಾದ ದೇಶಗಳಿಗೂ ಅಪಾಯ: ಕೆನಡಾ, ಆಸ್ಟ್ರಿಯಾ, ಬ್ರಿಟನ್ ಮತ್ತು ಫಿನ್ಲೆಂಡ್‌ನಂತಹ ತಂಪಾದ ಹವಾಮಾನ ಹೊಂದಿರುವ ದೇಶಗಳೂ




ಇದರಿಂದ ಪಾರಾಗಲು ಸಾಧ್ಯವಿಲ್ಲ. ನಾರ್ವೆ ಮತ್ತು ಐರ್ಲೆಂಡ್‌ನಲ್ಲಿ ಬಿಸಿ ದಿನಗಳ ಸಂಖ್ಯೆ ಶೇ. 200 ಕ್ಕಿಂತ ಹೆಚ್ಚು ಏರಿಕೆಯಾಗಬಹುದು.

ಕೂಲಿಂಗ್ ಬೇಡಿಕೆ ಹೆಚ್ಚಳ:

ಸಂಶೋಧನಾ ತಂಡದ ಮುಖ್ಯಸ್ಥ ಡಾ. ಜೀಸಸ್ ಲಿಜಾನಾ ಅವರ ಪ್ರಕಾರ, ತಾಪಮಾನವು 1.5 ಡಿಗ್ರಿ ಮಿತಿಯನ್ನು ತಲುಪುವ ಮೊದಲೇ ನಮಗೆ ಹವಾನಿಯಂತ್ರಣದ (ಯಡಿ–ಛಿಅಟಿಜುಣುಅಟುಟಿಅ) ಅವಶ್ಯಕತೆ ಹೆಚ್ಚಾಗಲಿದೆ. "ಮುಂದಿನ ಐದು ವರ್ಷಗಳಲ್ಲಿ ಲಕ್ಷಾಂತರ ಮನೆಗಳಿಗೆ ಎಸಿ ಅಳವಡಿಸಬೇಕಾದ ಅನಿವಾರ್ಯತೆ ಬರಬಹುದು" ಎಂದು ಅವರು ಎಚ್ಚರಿಸಿದ್ದಾರೆ.

ಆಕ್ಸ್‌ಫರ್ಡ್ ಮಾರ್ಟಿನ್ ಫ್ಯೂಚರ್ ಆಫ್ ಕೂಲಿಂಗ್ ಪ್ರೋಗ್ರಾಂನ ನಾಯಕಿ ಡಾ. ರಾಧಿಕಾ ಖೋಸ್ಲಾ ಮಾತನಾಡಿ, "ಈ ಸಂಶೋಧನೆಯು ಪ್ರತಿಯೊಬ್ಬರಿಗೂ 'ಎಚ್ಚರಿಕೆ ಗಂಟೆ' ಆಗಿರಬೇಕು. ತಾಪಮಾನ ಏರಿಕೆಯು ಶಿಕ್ಷಣ, ಆರೋಗ್ಯ, ಕೃಷಿ ಮತ್ತು ವಲಸೆಯ ಮೇಲೆ ಹಿಂದೆಂದೂ ಕಂಡಿರದ ಪ್ರಭಾವ ಬೀರಲಿದೆ. ರಾಜಕಾರಣಿಗಳು ತಕ್ಷಣವೇ ಸುಸ್ಥಿರ ಅಭಿವೃದ್ಧಿಯತ್ತ ಗಮನಹರಿಸುವುದು ಅನಿವಾರ್ಯ" ಎಂದು ತಿಳಿಸಿದ್ದಾರೆ.

ಹವಾಮಾನ ಬದಲಾವಣೆಯ ಈ ಭೀಕರ ಪರಿಣಾಮಗಳನ್ನು ತಡೆಗಟ್ಟಲು ಆಕ್ಸ್‌ಫರ್ಡ್ ಅಧ್ಯಯನ ಮತ್ತು ಜಾಗತಿಕ ಪರಿಸರ ವಿಜ್ಞಾನಿಗಳು ಸರ್ಕಾರಗಳಿಗೆ ಸೂಚಿಸಿರುವ ಪ್ರಮುಖ ಕ್ರಮಗಳು ಇಲ್ಲಿವೆ:

ಇಂಗಾಲದ ಹೊರಸೂಸುವಿಕೆ ಇಳಿಕೆ

ಪಳೆಯುಳಿಕೆ ಇಂಧನಗಳ ಬಳಕೆ ಕಡಿಮೆ: ಕಲ್ಲಿದ್ದಲು, ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಆದಷ್ಟು ಬೇಗ ನಿಲ್ಲಿಸಿ, ಸೌರಶಕ್ತಿ ಮತ್ತು ಗಾಳಿ ಶಕ್ತಿಯಂತಹ ನವೀಕರಿಸಬಹುದಾದ ಇಂಧನಗಳ ಕಡೆಗೆ ಗಮನಹರಿಸುವುದು.

ಕೈಗಾರಿಕಾ ಸುಧಾರಣೆ: ಕೈಗಾರಿಕೆಗಳಿಂದ ಹೊರಬರುವ ವಿಷಕಾರಿ ಅನಿಲಗಳನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರುವುದು.

ಸುಸ್ಥಿರ ಕಟ್ಟಡ ವಿನ್ಯಾಸ

ತಂಪಾದ ಮನೆಗಳು: ಭವಿಷ್ಯದ ಶಾಖವನ್ನು ತಡೆದುಕೊಳ್ಳಲು ಕಟ್ಟಡಗಳ ವಿನ್ಯಾಸ ಬದಲಾಗಬೇಕು. ಗಾಳಿ ಸಂಚಾರ ಹೆಚ್ಚಿರುವ ಮತ್ತು ಶಾಖವನ್ನು ಹೀರಿಕೊಳ್ಳದ ಕಾಂಕ್ರೀಟ್ ಬದಲಿಗೆ ಪರಿಸರ ಸ್ನೇಹಿ ವಸ್ತುಗಳನ್ನು ಬಳಸಿ ಮನೆಗಳನ್ನು ನಿರ್ಮಿಸುವುದು.

ನಗರ ಯೋಜನೆ: ನಗರಗಳಲ್ಲಿ ಸಿಮೆಂಟ್ ಕಾಡುಗಳ ಬದಲಿಗೆ ಹೆಚ್ಚು ಉದ್ಯಾನವನಗಳು ಮತ್ತು ಕೆರೆಗಳನ್ನು ನಿರ್ಮಿಸಿ 'ಅರ್ಬನ್ ಹೀಟ್ ಐಲ್ಯಾಂಡ್' ಪ್ರಭಾವವನ್ನು ಕಡಿಮೆ ಮಾಡುವುದು.

ಕೃಷಿ ಮತ್ತು ಆಹಾರ ಭದ್ರತೆ

ಬರ ನಿರೋಧಕ ತಳಿಗಳು: ವಿಪರೀತ ಬಿಸಿಲನ್ನು ತಡೆದುಕೊಳ್ಳಬಲ್ಲ



ಬೆಳೆಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ಮತ್ತು ತಾಂತ್ರಿಕ ನೆರವು ನೀಡುವುದು.

ನೀರಿನ ನಿರ್ವಹಣೆ: ಅಂತರ್ಜಲ ಮಟ್ಟ ಹೆಚ್ಚಿಸಲು ಮಳೆನೀರು ಕೊಯ್ಲು ಮತ್ತು ಹನಿ ನೀರಾವರಿ ಪದ್ಧತಿಯನ್ನು ಕಡ್ಡಾಯಗೊಳಿಸುವುದು.

ಆರೋಗ್ಯ ರಕ್ಷಣಾ ವ್ಯವಸ್ಥೆ

ಹೀಟ್ ಆಕ್ಷನ್ ಪ್ಲಾನ್ ಬೀಸುವ ಸಮಯದಲ್ಲಿ ಜನರನ್ನು ರಕ್ಷಿಸಲು ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆ ಮಾಡುವುದು.

ಬಿಸಿಲಿನಿಂದ ಉಂಟಾಗುವ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಆಸ್ಪತ್ರೆಗಳಲ್ಲಿ ವಿಶೇಷ ವಿಭಾಗಗಳನ್ನು ತೆರೆಯುವುದು.

ಹಸಿರೀಕರಣ

ಕಾಡುಗಳ ನಾಶವನ್ನು ತಡೆಗಟ್ಟುವುದು ಮತ್ತು ಖಾಲಿ ಇರುವ ಜಾಗಗಳಲ್ಲಿ ದೊಡ್ಡ ಮಟ್ಟದ ಅರಣ್ಯೀಕರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಗಿಡಮರಗಳು ನೈಸರ್ಗಿಕವಾಗಿ ತಾಪಮಾನವನ್ನು ಕಡಿಮೆ ಮಾಡುವ ಶಕ್ತಿ ಹೊಂದಿವೆ.

# ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ'ಸಾಹಿತ್ಯ ಸಹವಾಸ' ಕಾರ್ಯಕ್ರಮ

ಸಮಕಾಲೀನ ಲೇಖಕರಾದ ನಾಡೋಜ ಬರಗೂರು ರಾಮಚಂದ್ರಪ್ಪ ಮತ್ತು ಶ್ರೀಮತಿ ಲಲಿತಾ ಸಿದ್ದಬಸವಯ್ಯ ಅವರ ಸಾಹಿತ್ಯ ಕೊಡುಗೆಗಳನ್ನು ಸಂಭ್ರಮಿಸುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ'ಸಾಹಿತ್ಯ ಸಹವಾಸ' ಕಾರ್ಯಕ್ರಮ

ತುಮಕೂರು, ಜನವರಿ29, 2026:ಕರ್ನಾಟಕದ ಶ್ರೀಮಂತ ಸಾಂಸ್ಕೃತಿಕ ಪರಂಪರೆ, ಸಾಹಿತ್ಯ ದಿಗ್ಗಜರ ಕೊಡುಗೆ ಮತ್ತು ಕನ್ನಡ ಭಾಷೆಯನ್ನು ಸಂಭ್ರಮಿಸುವ 'ಸಾಹಿತ್ಯ ಸಹವಾಸ' ಕಾರ್ಯಕ್ರಮ ಸರಣಿಯ ಆರನೇ ಆವೃತ್ತಿಯನ್ನು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಫೆಬ್ರವರಿ 1 ರಂದು ತುಮಕೂರಿನಲ್ಲಿಆಯೋಜಿಸುತ್ತಿದೆ.

ಈ ಕಾರ್ಯಕ್ರಮವು ತುಮಕೂರಿನ ಕನ್ನಡ ಭವನದಲ್ಲಿ ನಡೆಯಲಿದ್ದು, ಇಬ್ಬರು ಪ್ರಮುಖ ಸಮಕಾಲೀನ ಸಾಹಿತಿಗಳಾದ ಡಾ. ಬರಗೂರು ರಾಮಚಂದ್ರಪ್ಪ ಮತ್ತು ಶ್ರೀಮತಿ ಲಲಿತಾ ಸಿದ್ದಬಸವಯ್ಯ ಅವರ ಜೀವನ ಮತ್ತು ಸಾಹಿತ್ಯಕ ಕೊಡುಗೆಗಳನ್ನು ಸಂಭ್ರಮಿಸುತ್ತದೆ. ಖ್ಯಾತ ವಿಮರ್ಶಕರಾದ ಡಾ. ಎಚ್.ಎಸ್. ರಾಘವೇಂದ್ರರಾವ್ ಕಾರ್ಯಕ್ರಮವನ್ನು ಉದ್ಘಾಟಿಸಿ ಆಶಯ ಭಾಷಣ ಮಾಡಲಿದ್ದಾರೆ.

ಇಡೀ ದಿನ ನಡೆಯುವ ಈ ಕಾರ್ಯಕ್ರಮದಲ್ಲಿ ಡಾ. ರಾಜಪ್ಪ ದಳವಾಯಿ, ಶ್ರೀ. ಆರ್.ಜಿ. ಹಳ್ಳಿ ನಾಗರಾಜ್, ಡಾ. ಆಶಾ ಬಗ್ಗನಡು, ಶ್ರೀ. ಚ.ಹ. ರಘುನಾಥ್ ಮತ್ತು ಶ್ರೀಮತಿ ದಿವ್ಯಶ್ರೀ ಬಿ.ಎನ್. ಅವರನ್ನೊಳಗೊಂಡ ಸಾಹಿತ್ಯಕಗೋಷ್ಠಿಗಳು, ಕವಿ ಗೋಷ್ಠಿ, ನಾಟಕ ರತ್ನ ಗುಬ್ಬಿ ವೀರಣ್ಣನವರ ಗೌರವಾರ್ಥವಾಗಿ ಡಾ. ಲಕ್ಷ್ಮಣದಾಸ್ ಮತ್ತು ತಂಡದವರಿಂದ ರಂಗಗೀತೆಗಳ ಗಾಯನ, ಹಾಗೂ ಮೇಲಿನ ಇಬ್ಬರು ಲೇಖಕರ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ. ಜೊತೆಗೆ, ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ ಲೇಖನ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಲಾಗುವುದು.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ಕನ್ನಡ ನುಡಿ ಮತ್ತು ಸಂಸ್ಕೃತಿಯನ್ನು ಸಮೃದ್ಧಗೊಳಿಸಲು ಅನೇಕ ಉಪಕ್ರಮಗಳನ್ನು ಆಯೋಜಿಸುತ್ತಿದೆ. ಇವುಗಳಲ್ಲಿ 'ಅನುವಾದ ಸಂಪದ' ಎಂಬ ಆನ್‌ಲೈನ್ ಕನ್ನಡ ಭಾಷಾಂತರ ಕಣಜ,ಕಥಾವನಎನ್ನುವ ಮಕ್ಕಳ ವಾರ್ಷಿಕ ಸಾಹಿತ್ಯಕ ಉತ್ಸವ ಮತ್ತು ಕನ್ನಡದಲ್ಲಿ ಮಕ್ಕಳ ಸಾಹಿತ್ಯವನ್ನು ಸಮೃದ್ಧಗೊಳಿಸಲು ಪುಸ್ತಕಗಳ ನಿರ್ಮಾಣಯೋಜನೆ,ಪ್ರಮುಖ




ಸಾಹಿತಿಗಳ ಕೊಡುಗೆಗಳನ್ನು ಮುನ್ನೆಲೆಗೆ ತರುವ 'ಸಾಹಿತ್ಯ ಸಹವಾಸ' ಎನ್ನುವ ಸಾಹಿತ್ಯಕ ಕಾರ್ಯಕ್ರಮ, 'ಕೃಷ್ಣೆಯಿಂದ ಕಾವೇರಿವರೆಗೆ' ಎಂಬ ಕರ್ನಾಟಕದ ವೈವಿಧ್ಯವನ್ನು ಆಚರಿಸುವ ಸಾಂಸ್ಕೃತಿಕ ಸಂಗಮದ ಹಬ್ಬ, ರಾಜ್ಯದ ಶ್ರೀಮಂತ ಸಾಂಸ್ಕೃತಿಕ ಪರಿಸರವನ್ನು ಅನಾವರಣಗೊಳಿಸುವ 'ಸಂಸ್ಕೃತಿ ಸಂಭ್ರಮ' ಎಂಬ ಕಾರ್ಯಕ್ರಮ ಸರಣಿ ಹಾಗೂ ರಾಜ್ಯದ ಇತಿಹಾಸದಲ್ಲಿ ಹೆಮ್ಮೆಯ ಸ್ಥಾನವನ್ನು ಗಿಟ್ಟಿಸಿಕೊಂಡಿರುವ ಘಟನೆಗಳು, ಸ್ಥಳಗಳು ಮತ್ತು ವ್ಯಕ್ತಿಗಳ ಕುರಿತಂತೆ ರೇಡಿಯೋ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಮೂಡಿ ಬರುವ 'ನೂರಕ್ಕೆ ನೂರು ಕರ್ನಾಟಕ' ಕಾರ್ಯಕ್ರಮ ಮುಂತಾದವು ಒಳಗೊಂಡಿವೆ. ವಿಶ್ವವಿದ್ಯಾಲಯವು 'ಸಾಹಿತ್ಯ ಸಹವಾಸ' ಸರಣಿಯ ಮೂಲಕ ಕರ್ನಾಟಕದ ಸಾಂಸ್ಕೃತಿಕ ಲೋಕಕ್ಕೆ ಇನ್ನಷ್ಟು ಕೊಡುಗೆಯನ್ನು ನೀಡುವ ಉದ್ದೇಶ ಹೊಂದಿದೆ.

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಕುರಿತು

ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಕರ್ನಾಟಕ ಸರಕಾರದ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ ಕಾಯಿದೆ 2010 ರ ಅಡಿಯಲ್ಲಿ ಸ್ಥಾಪಿಸಲಾಗಿದೆ. ಭೋಪಾಲದಲ್ಲಿರುವ ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವನ್ನು ಮಧ್ಯಪ್ರದೇಶ ನಿಜಿ ವಿಶ್ವವಿದ್ಯಾಲಯ (ಸ್ಥಾಪನಾ ಏವಂ ಸಂಚಾಲನ್)ದ್ವಿತೀಯ ಸಂಶೋಧನ್ ಅಧಿನಿಯಮ್, 2022 ಅನುಸಾರ ಸ್ಥಾಪಿಸಲಾಗಿದೆ.

# ಕೇಂದ್ರ ಬಜೆಟ್ 2026: ಮಧ್ಯಮ ವರ್ಗ, ವೇತನ ತೆರಿಗೆದಾರರು,ಜನಸಾಮಾನ್ಯರ ನಿರೀಕ್ಷೆಗಳೇನು?

ಕೇಂದ್ರ ಬಜೆಟ್ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ, ತೆರಿಗೆದಾರರು ಹೊಸ ಐಟಿಆರ್ ಫಾರ್ಮ್, ಸರಳೀಕೃತ ಟಿಡಿಎಸ್ ನಿಯಮಗಳು ಮತ್ತು ವಾಯು ಮಾಲಿನ್ಯ ನಿಯಂತ್ರಣಕ್ಕೆ ತೆರಿಗೆ ವಿನಾಯಿತಿಗಳಂತಹ ಮಹತ್ವದ ಸುಧಾರಣೆಗಳನ್ನು ಎದುರು ನೋಡುತ್ತಿದ್ದಾರೆ. ಹೊಸ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬರುವ ಮೊದಲು ಮಾಸ್ಟರ್ ಸರ್ಕ್ಯುಲರ್ ಹೊರಬರುವ ನಿರೀಕ್ಷೆಯಿದೆ. ಈ ಬದಲಾವಣೆಗಳು ತೆರಿಗೆ ಪಾವತಿದಾರರ ಮೇಲಿನ ಭಾರವನ್ನು ಕಡಿಮೆ ಮಾಡುವ ಸಾಧ್ಯತೆ ಇದೆ.

ಬಹುನಿರಿಕ್ಷಿತ ಕೇಂದ್ರ ಬಜೆಟ್‌ಗೆ ಇನ್ನು ಕೆಲವೇ ದಿನಗಳು ಬಾಕಿ ಉಳಿದಿವೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಮೇಲೆ ತೆರಿಗೆದಾರರ ಕಣ್ಣುನೆಟ್ಟಿದೆ. ಪ್ರತಿಬಾರಿಯಂತೆ ಈ ಬಾರಿಯೂ ತೆರಿಗೆದಾರರು ದೊಡ್ಡ ಮಟ್ಟದ ನಿರೀಕ್ಷೆಯನ್ನು ಇಟ್ಟುಕೊಂಡಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ತೆರಿಗೆದಾರರು ಇಟ್ಟಿರುವ ಪ್ರಮುಖ ಬೇಡಿಕೆಗಳು ಏನೇನು? ಬಜೆಟ್‌ನಲ್ಲಿ ತೆರಿಗೆದಾರರು ಏನೆಲ್ಲಾ ಅಂಶಗಳನ್ನು ನಿರೀಕ್ಷಿಸಬಹುದು ಎಂಬುದರ ಒಂದು ಸಮಗ್ರ ಮುನ್ನೋಟ ಇಲ್ಲಿದೆ.

### 'ಒಂದು ದೇಶ – ಒಂದು ಆದಾಯ ತೆರಿಗೆ ರಿಟರ್ನ್ (ಐಟಿಆರ್) ಫಾರ್ಮ್




ಪ್ರಸ್ತುತ ಆದಾಯ ತೆರಿಗೆ ಪದ್ಧತಿಯಲ್ಲಿ ತೆರಿಗೆದಾರರು ತಮ್ಮ ವಿವಿಧ ಆದಾಯದ ಮೂಲಗಳಿಗೆ ಅನುಗುಣವಾಗಿ ಏಳು ವಿಭಿನ್ನ ಐಟಿಆರ್ ಫಾರ್ಮ್ (ಆದಾಯ ತೆರಿಗೆ ವಿವರ ಸಲ್ಲಿಕೆಯ ಅರ್ಜಿ ನಮೂನೆ) ಗಳನ್ನು ಬಳಸಬೇಕಿದ್ದು, ಇದು ಸಾಮಾನ್ಯ ಜನರಲ್ಲಿ ಗೊಂದಲ ಮೂಡಿಸುವುದಲ್ಲದೆ ಸಲ್ಲಿಕೆಯ ಸಮಯದಲ್ಲಿ ತಪ್ಪುಗಳಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ, ಎಲ್ಲಾ ವರ್ಗದ ತೆರಿಗೆದಾರರಿಗೂ ಅನ್ವಯವಾಗುವಂತೆ ಒಂದೇ ಸಾಮಾನ್ಯ ಐಟಿಆರ್ ಫಾರ್ಮ್ ಅನ್ನು ಪರಿಚಯಿಸಬೇಕೆಂಬ ಬಲವಾದ ಬೇಡಿಕೆಯಿದೆ. ಈ ಏಕರೂಪದ ಫಾರ್ಮ್ ಜಾರಿಗೆ ಬಂದಲ್ಲಿ, ತೆರಿಗೆದಾರರು ತಮ್ಮ ಅನ್ವಯಿತ ಆದಾಯದ ಮೂಲಗಳನ್ನು ಆಯ್ಕೆ ಮಾಡಿದ ತಕ್ಷಣ ಅವರಿಗೆ ಸಂಬಂಧಿಸಿದ ಈಗಾಗಲೇ ಮಾಹಿತಿ ನಮೂದಾಗಿರುವ ಒಂದು ಟೆಂಪ್ಲೇಟ್‌ಗಳು ('ಪ್ರಿ-ಫಿಲ್ಡ್' ಮಾಹಿತಿಯಿರುವ ಶೆಡ್ಯೂಲ್‌ಗಳು) ಮಾತ್ರ ಕಾಣಿಸಿಕೊಳ್ಳುತ್ತವೆ. ಇದರಿಂದ ತೆರಿಗೆ ರಿಟರ್ನ್ ಸಲ್ಲಿಕೆ ಪ್ರಕ್ರಿಯೆಯು ಅತ್ಯಂತ ಸರಳ, ಸುಲಭ ಮತ್ತು ದೋಷಮುಕ್ತವಾಗಲಿದ್ದು, ತೆರಿಗೆದಾರರ ಮೇಲಿನ ಹೊರೆ ಕಡಿಮೆಯಾಗಲಿದೆ.

### ಹೊಸ ಕಾಯ್ದೆಗೆ ಮಾಸ್ಟರ್ ಸರ್ಕ್ಯುಲರ್

ಕಳೆದ ಆರು ದಶಕಗಳಿಂದ ಜಾರಿಯಲ್ಲಿರುವ 1961ರ ಆದಾಯ




ತೆರಿಗೆ ಕಾಯ್ದೆಯ ಅಡಿಯಲ್ಲಿ ಸಾವಿರಾರು ಸುತ್ತೋಲೆಗಳು ಮತ್ತು ಅಧಿಸೂಚನೆಗಳು ಹೊರಬಿದ್ದಿದ್ದು, ಇವುಗಳ ಸಂಕೀರ್ಣತೆಯನ್ನು ನಿವಾರಿಸಲು ಏಪ್ರಿಲ್ 1, 2026 ರಿಂದ ಹೊಸ ಕಾಯ್ದೆ ಜಾರಿಯಾಗಲಿದೆ. ಆದರೆ, ಈ ಕಾಯ್ದೆಯ ಜಾರಿಗೂ ಮುನ್ನ ಸ್ಪಷ್ಟತೆ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ, ಹಳೆಯ ಮತ್ತು ಈಗ ಅಪ್ರಸ್ತುತವಾಗಿರುವ ನಿಯಮಗಳನ್ನು ಕೈಬಿಟ್ಟು, ಕೇವಲ ಜಾರಿಯಲ್ಲಿರುವ ನಿಯಮಗಳನ್ನು ಒಳಗೊಂಡ ಒಂದು ಸಮಗ್ರ 'ಮಾಸ್ಟರ್ ಸರ್ಕ್ಯುಲರ್' ಅನ್ನು ಸರ್ಕಾರ ಹೊರಡಿಸಬೇಕೆಂಬ ಸಲಹೆ ಕೇಳಿಬಂದಿದೆ. ಹೊಸ ಕಾಯ್ದೆಯ ಸೆಕ್ಷನ್‌ಗಳಿಗೆ ಪೂರಕವಾಗಿ ಈ ಮಾಸ್ಟರ್ ಸರ್ಕ್ಯುಲರ್ ಅನ್ನು ಪ್ರತಿ ವರ್ಷ ನವೀಕರಿಸಿ ಬಿಡುಗಡೆ ಮಾಡುವುದರಿಂದ, ತೆರಿಗೆದಾರರು ಮತ್ತು ವೃತ್ತಿಪರರು ಗೊಂದಲವಿಲ್ಲದೆ ಸರಿಯಾದ ನಿಯಮಗಳನ್ನು ಉಲ್ಲೇಖಿಸಲು ಸಾಧ್ಯವಾಗುತ್ತದೆ. ಇದು ತೆರಿಗೆ ಕಾನೂನನ್ನು ಸರಳಗೊಳಿಸುವ ಸರ್ಕಾರದ ಉದ್ದೇಶಕ್ಕೆ ಪೂರಕವಾಗಿದ್ದು, ಕಾನೂನು ಪಾಲನೆಯನ್ನು ಮತ್ತಷ್ಟು ಸುಲಭಗೊಳಿಸಲಿದೆ.

### ಟಿಡಿಎಸ್ (TDS) ನಿಯಮಗಳ ಸುಧಾರಣೆ

ಪ್ರಸ್ತುತ ಚಾಲ್ತಿಯಲ್ಲಿರುವ ಮೂಲದಲ್ಲಿ ತೆರಿಗೆ ಕಡಿತ (ಟಿಡಿಎಸ್) ಪ್ರಕ್ರಿಯೆಯು ಅತ್ಯಂತ ಸಂಕೀರ್ಣವಾಗಿದ್ದು, ಇದನ್ನು ಸರಳಗೊಳಿಸಲು ಕಂದಾಯ–ತಟಸ್ಥ ರೀತಿಯಲ್ಲಿ ವ್ಯವಸ್ಥೆಯನ್ನು ಸುಧಾರಿಸುವ ತುರ್ತು ಅಗತ್ಯವಿದೆ. ಮೊದಲನೆಯದಾಗಿ, ಈಗಿರುವ ಹತ್ತಾರು ವಿವಿಧ ಟಿಡಿಎಸ್ ದರಗಳನ್ನು ಕೇವಲ 2–3 ಸ್ಥಿರ ದರಗಳಿಗೆ ಇಳಿಸುವುದರಿಂದ ತೆರಿಗೆದಾರರಿಗೆ ನಿಯಮಗಳ ಪಾಲನೆ ಸುಲಭವಾಗುತ್ತದೆ. ಎರಡನೆಯದಾಗಿ, ಟಿಡಿಎಸ್ ಮಾಹಿತಿ ಈಗಾಗಲೇ ಫಾರ್ಮ್ 26ಂಖ ಮತ್ತು ವಾರ್ಷಿಕ ಮಾಹಿತಿ ವಿವರದಲ್ಲಿ ಲಭ್ಯವಿರುವುದರಿಂದ, ಪ್ರತ್ಯೇಕವಾಗಿ ಟಿಡಿಎಸ್ ಪ್ರಮಾಣಪತ್ರಗಳನ್ನು ವಿತರಿಸುವ ಅಗತ್ಯವನ್ನು ಸರ್ಕಾರ ಕೈಬಿಡಬಹುದು. ಕೊನೆಯದಾಗಿ, ಆದಾಯ ಮತ್ತು ಟಿಡಿಎಸ್ ನಡುವಿನ ಹೊಂದಾಣಿಕೆಯ ವ್ಯತ್ಯಾಸಗಳಿಂದ ಉಂಟಾಗುವ ಕಾನೂನು ವಿವಾದಗಳನ್ನು ತಪ್ಪಿಸಲು 'ಟಿಡಿಎಸ್ ಲೆಡ್ಜರ್' ಯಾಂತ್ರಿಕತೆಯನ್ನು ಜಾರಿಗೆ ತರಬೇಕು. ಈ ಕ್ರಮಗಳು ತೆರಿಗೆದಾರರ ಮೇಲಿನ ಹೊರೆಯನ್ನು ಕಡಿಮೆ ಮಾಡುವುದಲ್ಲದೆ, ವ್ಯಾಖ್ಯಾನದ ಸಮಸ್ಯೆಗಳಿಂದ ಉಂಟಾಗುವ ದಾವೆಗಳನ್ನು ತಗ್ಗಿಸಲು ಸಹಾಯ ಮಾಡುತ್ತವೆ.

### ವಾಯು ಮಾಲಿನ್ಯ ತಡೆಗೆ ತೆರಿಗೆ ಪ್ರೋತ್ಸಾಹ

ಭಾರತದ ಅನೇಕ ನಗರಗಳು ಜಾಗತಿಕವಾಗಿ ಅತಿ ಹೆಚ್ಚು ಕಲುಷಿತ ನಗರಗಳ ಪಟ್ಟಿಯಲ್ಲಿ ಸೇರುತ್ತಿರುವುದರಿಂದ, ವಾಯು ಮಾಲಿನ್ಯದ ಸಮಸ್ಯೆಯನ್ನು ಎದುರಿಸಲು ನೇರ ತೆರಿಗೆ ಕಾನೂನನ್ನು ಒಂದು ಪ್ರಬಲ ಸಾಧನವಾಗಿ ಬಳಸಿಕೊಳ್ಳಬಹುದು. ಪ್ರಸ್ತುತ ದೇಶವು ಎದುರಿಸುತ್ತಿರುವ ಆರೋಗ್ಯ ತುರ್ತುಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಹೊಸ ತೆರಿಗೆ ಪದ್ಧತಿಯಲ್ಲಿ ಎಲೆಕ್ಟ್ರಿಕ್ ವಾಹನಗಳ ಖರೀದಿಗೆ ವಿಶೇಷ ತೆರಿಗೆ ವಿನಾಯಿತಿಗಳನ್ನು ನೀಡುವ ಮೂಲಕ ಜನರನ್ನು ಪರಿಸರ ಸ್ನೇಹಿ ಸಾರಿಗೆಯತ್ತ ಉತ್ತೇಜಿಸಬಹುದಾಗಿದೆ. ಇದರೊಂದಿಗೆ, ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಮಾಲಿನ್ಯ ನಿಯಂತ್ರಣ ಸಂಶೋಧನೆ ಅಥವಾ ಸರ್ಕಾರದ ಮಾಲಿನ್ಯ ತಡೆ ಯೋಜನೆಗಳಿಗೆ ವಿನಿಯೋಗಿಸಿದರೆ, ಅಂತಹ ವೆಚ್ಚವನ್ನು ತೆರಿಗೆ ಕಡಿತಕ್ಕೆ ಅರ್ಹವಾದ ವೆಚ್ಚವೆಂದು ಪರಿಗಣಿಸಬೇಕು. ಈ ಕ್ರಮಗಳು ಮಾಲಿನ್ಯದ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸದಿದ್ದರೂ, ಪರಿಸರ ರಕ್ಷಣೆಯ ನಿಟ್ಟಿನಲ್ಲಿ ಸರ್ಕಾರದ ಪ್ರಯತ್ನಗಳಿಗೆ ದೊಡ್ಡ ಮಟ್ಟದ ಬೆಂಬಲವನ್ನು ನೀಡಲಿವೆ.

### ಕೇಂದ್ರ ಬಜೆಟ್: ಕರ್ನಾಟಕದ ಬೇಡಿಕಗಳೇನು?



ನೀರಾವರಿ: ಕೃಷ್ಣಾ ಮೇಲ್ದಂಡೆ, ಎತ್ತಿನಹೊಳೆ, ಮಹದಾಯಿ ಯೋಜನೆಗೆ 'ರಾಷ್ಟ್ರೀಯ ಯೋಜನೆ' ಮಾನ್ಯತೆ ನಿರೀಕ್ಷೆ.

ಭದ್ರಾ ಮೇಲ್ದಂಡೆ: 2023ರಲ್ಲಿ ಘೋಷಣೆಯಾಗಿದ್ದ 5,300 ಕೋಟಿ ರೂ. ಅನುದಾನ ಬಿಡುಗಡೆಗೆ ಆಗ್ರಹ.

ಬೆಂಗಳೂರು ಮೆಟ್ರೋ: ನಮ್ಮ ಮೆಟ್ರೋ 3ನೇ ಹಂತದ ವಿಸ್ತರಣೆಗೆ ಕೇಂದ್ರದ ಆರ್ಥಿಕ ನೆರವು. ಸಬ್ ಅರ್ಬನ್ ರೈಲಿಗೆ ಹೆಚ್ಚಿನ ಅನುದಾನ.

ಹೈಸ್ಪೀಡ್ ರೈಲು: ಚೆನ್ನೈ–ಬೆಂಗಳೂರು–ಮೈಸೂರು ಹೈಸ್ಪೀಡ್ ರೈಲ್ವೆ ಯೋಜನೆಗೆ ಗ್ರೀನ್ ಸಿಗ್ನಲ್.

ಹಾಸನ ಐಐಟಿ, ಶಿರಾಡಿ ಸುಂರಂಗ, ರಾಯಚೂರು ಏಮ್ಸ್, ವಿಶ್ವೇಶ್ವರಯ್ಯ ಉಕ್ಕು ಕಾರ್ಖಾನೆಗೆ ಮರುಜೀವ ನಿರೀಕ್ಷೆ.

ಮಂಡ್ಯದಲ್ಲಿ ಕೈಗಾರಿಕೆ ಸ್ಥಾಪನೆ ನಿರೀಕ್ಷೆ, ಮೈಸೂರು– ಕುಶಾಲನಗರ ಹೊಸ ರೈಲು ಯೋಜನೆ.

ಅನುದಾನ ಕೊರತೆಯಿಂದ ರಾಜ್ಯದ ನೀರಾವರಿ ಯೋಜನೆಗಳ ಅನುಷ್ಠಾನ ಬಾಕಿ ಉಳಿದಿವೆ. ರಾಜ್ಯದ ಕೆಲವು ನೀರಾವರಿ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಯಾಗಿ ಘೋಷಿಸಿದರೆ ಶೇ 90ರಷ್ಟು ಅನುದಾನ ಕೇಂದ್ರದಿಂದಲೇ ಸಿಗಲಿದೆ. ಇದು ಬರಪೀಡಿತ 23 ಜಿಲ್ಲೆಗಳ 150ಕ್ಕೂ ಹೆಚ್ಚು ತಾಲೂಕುಗಳಿಗೆ ವರದಾನವಾಗಲಿದೆ. 2023ರಲ್ಲಿ ಚುನಾವಣೆ ಸಂದರ್ಭದಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ ಸ್ವತಃ ಕೇಂದ್ರ ಸರಕಾರವೇ ಘೋಷಣೆ ಮಾಡಿದ್ದ 5,300 ಕೋಟಿ ರೂ. ಇನ್ನೂ ಬಿಡುಗಡೆಯಾಗಿಲ್ಲ. ಹಣಬಿಡುಗಡೆ ಮಾಡುವಂತೆ ರಾಜ್ಯ ಸಾಕಷ್ಟು ಬಾರಿ ಮನವಿ ಮಾಡಿದೆ. ಘೋಷಣೆ ಮಾಡಿದ್ದ ಅನುದಾನ ಬಿಡುಗಡೆ ಮಾಡುವಂತೆ ಆಗ್ರಹಿಸಿದೆ. ಈ ಬಜೆಟ್ ನಲ್ಲಿ ಉತ್ತರ ಸಿಗಬಹುದಾ ಎಂಬ ನಿರೀಕ್ಷೆ ರಾಜ್ಯದ ಜನರಿಗಿದೆ. ಇನ್ನು ಮಹದಾಯಿ, ಮೇಕೆದಾಟು ಯೋಜನೆಗಳಿಗೆ ಅನುಷ್ಠಾನಕ್ಕೆ ಕೇಂದ್ರ ಸರಕಾರ ಅಧಿಕೃತ ಮುದ್ರೆ ಒತ್ತಬೇಕಿದೆ.

### ರೈಲ್ವೆ ಮತ್ತು ಕರಾವಳಿ ಅಭಿವೃದ್ಧಿಗೆ ಬೂಸ್ಟ್?

ರಾಜ್ಯದ ರೈಲ್ವೆ ಯೋಜನೆಗಳಿಗೆ ಈ ಬಾರಿ ಹೆಚ್ಚಿನ ಬಲ ಸಿಗುವ ಸಾಧ್ಯತೆಯಿದೆ. ಧಾರವಾಡ–ಕಿತ್ತೂರು–ಬೆಳಗಾವಿ, ಗಿಣಿಗೇರಾ–ರಾಯಚೂರು ಮಾರ್ಗಗಳ ಜೊತೆಗೆ ಕಲಬುರಗಿ ರೈಲ್ವೆ ವಿಭಾಗದ ಕನಸು ನನಸಾಗಬೇಕಿದೆ. ಇನ್ನು 360 ಕಿಲೋ ಮೀಟರ್ ಉದ್ದದ ಕಡಲ ತೀರ ಹೊಂದಿದ್ದರೂ ಅಭಿವೃದ್ಧಿ ಕಾಣದ ಕರ್ನಾಟಕದ ಬಂದರುಗಳಿಗೆ ಸಾಗರಮಾಲಾ ಯೋಜನೆಯಡಿ ವಿಶೇಷ ಪ್ಯಾಕೇಜ್ ಸಿಗುವ ನಿರೀಕ್ಷೆಯಿದೆ. ಜೊತೆಗೆ ಕೈಗಾರಿಕೆಗಳಿಗೆ ಪೂರಕವಾಗಿ ಉಕ್ಕಿನ ಪೂರೈಕೆಗೆ ರಿಯಾಯಿತಿ ಸಿಗಬಹುದು ಎನ್ನಲಾಗುತ್ತಿದೆ.

ಅತಿವೃಷ್ಟಿ,ಬರ ಮತ್ತು ಆರ್ಥಿಕ ಸವಾಲುಗಳು ರಾಜ್ಯದಲ್ಲಿ ಸಾಲದ ಹೊರೆ ಹೆಚ್ಚುತ್ತಿದೆ, ನಿರಂತರ ಅತಿವೃಷ್ಟಿ ಮತ್ತು ಪ್ರವಾಹದಿಂದ ಆರ್ಥಿಕತೆ ನಲುಗಿದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ನಿಧಿ ಹಂಚಿಕೆಯಾಗಬೇಕಿದೆ. ಗುಜರಾತ್, ಯುಪಿ ಮಾದರಿ ಯಲ್ಲಿ ಕರ್ನಾಟಕಕ್ಕೂ ಬೃಹತ್ ತಾಂತ್ರಿಕ ಯೋಜನೆಗಳನ್ನು ನೀಡುವ ಮೂಲಕ ಬಂಡವಾಳ ಹೂಡಿಕೆಗೆ ಉತ್ತೇಜನ ನೀಡಬೇಕೆಂಬುದು ಉದ್ಯಮ ಕ್ಷೇತ್ರದ ಒತ್ತಾಯವಾಗಿದೆ.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapr agathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಕೌಟುಂಬಿಕ ಸಂಘರ್ಷ.. ಟಿವಿ ಮಾಧ್ಯಮಗಳಲ್ಲಿ ಪ್ರಚಾರವಾಗುವುದರಿಂದ ಪರಿಹಾರ ಸಾಧ್ಯವೇ

ಕೌಟುಂಬಿಕ ಸಮಸ್ಯೆಗಳಿಗೆ, ಸಂಘರ್ಷಗಳಿಗೆ, ಮನಸ್ತಾಪಗಳಿಗೆ, ಜಂಜಾಟಗಳಿಗೆ, ಜಗಳಗಳಿಗೆ, ಹೊಡೆದಾಟಗಳಿಗೆ ದಯವಿಟ್ಟು ಮಾಧ್ಯಮಗಳಲ್ಲಿ ಪರಿಹಾರ ಕಂಡುಕೊಳ್ಳುವ ಮನಸ್ಥಿತಿಯನ್ನು ಬಿಟ್ಟುಬಿಡಿ ಅಥವಾ ಮಾಧ್ಯಮಗಳ ಮುಖಾಂತರ ನಿಮ್ಮ ವಿರೋಧಿಗಳನ್ನು, ಶತ್ರುಗಳನ್ನು, ನೀವು ದ್ವೇಷಿಸುವವರನ್ನು, ನಿಮಗೆ ಅನ್ಯಾಯ ಮಾಡಿದವರನ್ನು, ನಿಮ್ಮ ಮೇಲೆ ದೌರ್ಜನ್ಯ ಮಾಡಿರುವವರನ್ನು ಶಿಕ್ಷಿಸಬಹುದು, ಅವಮಾನಿಸಬಹುದು, ನ್ಯಾಯ ಪಡೆಯಬಹುದು ಎಂಬ ಅಭಿಪ್ರಾಯ ಇದ್ದರೆ ಅದು ಅಂತಹ ಒಳ್ಳೆಯ ಆಲೋಚನೆಯಲ್ಲ.

ಏಕೆಂದರೆ ನಿಮ್ಮ ವಿರುದ್ಧ ಇರುವವರು ಸಹ ಅದೇ ಮಾಧ್ಯಮಗಳನ್ನು ಉಪಯೋಗಿಸಿಕೊಂಡು ನಿಮ್ಮ ಬಗ್ಗೆ ಅದೇ ರೀತಿಯ ಪ್ರತ್ಯುತ್ತರ ಕೊಡುತ್ತಾರೆ. ಹೆಚ್ಚು ಕಡಿಮೆ ಮನೆಯಲ್ಲಿ ನಡೆದ ಜಗಳ ಬೀದಿರಂಪವಾಗಿ, ಮಾಧ್ಯಮಗಳ ಮುಖಾಂತರ ಇಡೀ ರಾಜ್ಯ ನೋಡುವಂತಾಗುತ್ತದೆ. ಅದರಿಂದ ಅಂತಹ ಯಾವ ಒಳ್ಳೆಯ ಪ್ರಯೋಜನವೂ ಇಲ್ಲ. ನಿಮ್ಮ ಸಮಸ್ಯೆ ಪರಿಹಾರ ಆಗುವ ಬದಲು ಮತ್ತಷ್ಟು ದೊಡ್ಡದಾಗುತ್ತದೆ. ಪೊಲೀಸರಿಗೆ ದೂರು ಕೊಟ್ಟು ಅಲ್ಲಿ ಸಾಧ್ಯವಾದರೆ ಹೊಂದಾಣಿಕೆಗೆ ಪ್ರಯತ್ನಿಸಿ. ಅದು ಸಾಧ್ಯವಾಗದಿದ್ದರೆ ನ್ಯಾಯಾಲಯಗಳಿಗೆ ಹೋಗುವುದು ಎಲ್ಲಾ ರೀತಿಯಲ್ಲೂ ನಾಗರೀಕ ಸಮಾಜದ ಅತ್ಯುತ್ತಮ ಮಾರ್ಗ.

ಒಂದು ವೇಳೆ ಕೌಟುಂಬಿಕ ಸಮಸ್ಯೆಗಳು ಮುಂದೆ ಪರಿಹಾರವಾಗಿ, ನಂತರ ಘಟನೆಯ ಬಗ್ಗೆ ಪಶ್ಚಾತಾಪವಾಗಿ, ಮತ್ತೆ ಸಂಬಂಧಗಳು ಬೆಸೆಯುವ ಅವಕಾಶಗಳಿರುತ್ತವೆ, ಅದು ಮನೆಗೆ ಸೀಮಿತವಾಗಿದ್ದಾಗ ಮಾತ್ರ. ಅದನ್ನು ಮೀರಿ ಟಿವಿ ಮಾಧ್ಯಮಗಳಲ್ಲಿ ಬಹಿರಂಗವಾದಾಗ ಮತ್ತೆ ಬೆಸೆಯುವ ಪ್ರಕ್ರಿಯೆಯು ತುಂಬಾ ಕಷ್ಟವಾಗಬಹುದು.

ಈ ಕೌಟುಂಬಿಕ ಸಂಘರ್ಷಗಳು ಆಧುನಿಕ ಜೀವನ ಶೈಲಿಯ ಒಂದು ಅನಿವಾರ್ಯ ಭಾಗವಾಗಿದೆ. ಎಲ್ಲೋ ಕೆಲವು ಅತ್ಯುತ್ತಮ ಮಾದರಿ, ಆದರ್ಶ ಕುಟುಂಬಗಳನ್ನು ಹೊರತುಪಡಿಸಿದರೆ ಬಹುತೇಕ ಕುಟುಂಬಗಳಲ್ಲಿ ಈ ರೀತಿಯ ಸಮಸ್ಯೆಗಳು ಬೇರೆ



ಬೇರೆ ರೂಪದಲ್ಲಿ ಪ್ರಕಟವಾಗುತ್ತದೆ. ಅದು ಕಡುಬಡವರಿಂದ ದೊಡ್ಡ ಶ್ರೀಮಂತರವರೆಗೆ, ಸಿನಿಮಾ ನಟರಿಂದ ವಿಜ್ಞಾನಿಗಳವರೆಗೆ, ಸಾಹಿತಿಗಳಿಂದ ಸ್ವಾಮೀಜಿಗಳವರೆಗೆ ಯಾರನ್ನೂ ಬಿಟ್ಟಿಲ್ಲ. ಇದು ಒಂದು ಸಾಮಾಜಿಕ ಪರಿವರ್ತನೆಯ ಸಂದರ್ಭದಲ್ಲಿ ಇಡೀ ಸಮಾಜ ಅನುಭವಿಸಬೇಕಾದ ಅನಿವಾರ್ಯ ಪರಿಸ್ಥಿತಿ.

ಹಣ ಕೇಂದ್ರೀಕೃತ ಸಮಾಜವನ್ನು ನಿರ್ಮಿಸಿ, ಜಮೀನು, ಅಧಿಕಾರ, ಬಂಗಾರ ಇತ್ಯಾದಿ ಆಸ್ತಿ, ಅಂತಸ್ತುಗಳೇ ಪ್ರಧಾನವಾಗಿರುವ ಸಾಮಾಜಿಕ ವ್ಯವಸ್ಥೆ ರೂಪಗೊಂಡಿರುವಾಗ, ಜೊತೆಗೆ ಮಹಿಳಾ ಸ್ವಾತಂತ್ರ್ಯ, ಸಮಾನತೆ, ಸ್ವಾವಲಂಬನೆ, ಸಮಾನ ಆಸಕ್ತಿಯ ಹಕ್ಕು ಸಮಾಜದಲ್ಲಿ ಗಟ್ಟಿಯಾಗಿ ಬೇರೂರುತ್ತಿರುವಾಗ, ಸಹಜವಾಗಿಯೇ ಪುರುಷ ಮತ್ತು ಮಹಿಳೆಯರು ಹಾಗೂ ಅಕ್ಕ–ತಂಗಿ, ಅಣ್ಣ ತಮ್ಮ, ಅಪ್ಪ ಮಕ್ಕಳ ನಡುವೆ ಸಂಘರ್ಷ ನಡೆದೇ ನಡೆಯುತ್ತದೆ. ಇದಕ್ಕೆ ನಾವ್ಯಾರು ಹೊರತಲ್ಲ.

ಆದರೆ ಇದು ನಿರಂತರ ಮತ್ತು ಶಾಶ್ವತವೇನು ಅಲ್ಲ. ಈ ಸಾಮಾಜಿಕ ಪರಿವರ್ತನೆ ಒಂದು ಹಂತಕ್ಕೆ ಬಂದ ನಂತರ, ಪುರುಷ ಮನಸ್ಥಿತಿ ಮಹಿಳಾ ಸಮಾನತೆಯ ಅನಿವಾರ್ಯತೆ ಮತ್ತು ವಾಸ್ತವವನ್ನು ಒಪ್ಪಿಕೊಂಡ ನಂತರ, ಹಣ, ಜಮೀನಿಗಿಂತ ಮನುಷ್ಯ ಸಂಬಂಧಗಳು ಮುಖ್ಯ ಎಂಬ ಭಾವನೆ ಸಮಾಜದಲ್ಲಿ ಮರು ಸ್ಥಾಪನೆಯಾದ ಬಳಿಕ ಸಹಜವಾಗಿಯೇ ಈ ಪರಿಸ್ಥಿತಿ ಮತ್ತೊಂದು ಹಂತ ತಲುಪಿ ಪರಿಸ್ಥಿತಿ ಬದಲಾಗಬಹುದು.

ಈ ವಿಷಯದಲ್ಲಿ ಮಾಧ್ಯಮಗಳು ಸಹ ವಿವೇಚನೆಯುಕ್ತವಾಗಿ ವರ್ತಿಸಿ ಈ ರೀತಿಯ ಖಾಸಗಿ ಗಲಾಟೆಗಳನ್ನು ದಯವಿಟ್ಟು ಪ್ರಸಾರ ಮಾಡಬೇಡಿ, ಪ್ರಚಾರ ಕೊಡಬೇಡಿ. ತೀರಾ ಹಿಂಸಾತ್ಮಕ, ದೌರ್ಜನ್ಯದ ಘಟನೆಗಳಿದ್ದಾಗ ಮಾತ್ರ ಸುದ್ದಿಯಾಗಿಸಿ. ಕುಟುಂಬಗಳ ನಡುವಿನ ನಿರ್ಧಿಷ್ಟವಾಗಿ ಗಂಡ ಹೆಂಡತಿ, ಅಪ್ಪ ಮಕ್ಕಳು, ಅಣ್ಣ ತಂಗಿ, ಅಕ್ಕ ತಮ್ಮ ಈ ರೀತಿಯ ಸಂಬಂಧಗಳ ಜಗಳಗಳಿಗೆ ಮಾನ್ಯತೆ ನೀಡಬೇಡಿ. ಅನಾವಶ್ಯಕವಾಗಿ ಟಿವಿಯಲ್ಲಿ ಒಬ್ಬರ ಮೇಲೆ ಒಬ್ಬರು ಆರೋಪ ಮಾಡಿಕೊಂಡು, ಅದಕ್ಕೆ ಅವರ ಸಂಬಂಧಿಕರು ಮತ್ತಷ್ಟು ತುಪ್ಪ ಸುರಿದು ಸಾಧನೆ ಮಾಡುವುದೇನು ಇರುವುದಿಲ್ಲ.

ಕೆಲವು ಮನಸ್ಸುಗಳು ಉದ್ವಿಗ್ನವಾಗಿದ್ದಾಗ, ಅಸಮಾಧಾನ, ಅಸಹಿಷ್ಣುತೆ ಇದ್ದಾಗ ಸಹಜವಾಗಿಯೇ ಎಲ್ಲರ ಮೇಲೆಯೂ ಕೋಪ ಬರುತ್ತದೆ. ಆ ಕೋಪದ ಭರದಲ್ಲಿ ಏನೇನೋ ಮಾತನಾಡುತ್ತಾರೆ. ಇನ್ನೂ ಕೆಲವರಿಗೆ ಮನಸ್ಸಿನ ಮೇಲೆ ನಿಯಂತ್ರಣವೇ ಇರುವುದಿಲ್ಲ, ಮುಂಗೋಪಿಗಳಾಗಿರುತ್ತಾರೆ, ತಕ್ಷಣಕ್ಕೆ ಪ್ರತಿಕ್ರಿಸುತ್ತಾರೆ. ನಂತರ ಪಶ್ಚಾತಾಪ ಪಡುತ್ತಾರೆ. ಎಷ್ಟೋ ಈ ರೀತಿಯ ಸಂಘರ್ಷಗಳು ಕಾಲಾ ನಂತರದಲ್ಲಿ ಒಂದುಗೂಡಿರುವುದನ್ನು ಕಾಣುತ್ತಿದ್ದೇವೆ.

ಇತ್ತೀಚೆಗಷ್ಟೇ ಇಬ್ಬರು ಗಂಡ ಹೆಂಡತಿ ಸಿಕ್ಕಾಪಟ್ಟೆ ಜಗಳಾಡಿ, ಬೇರೆ ಬೇರೆ ಹೋಗಿ, ಆಕೆ ಬೇರೆಯವರ ಜೊತೆ ವಾಸಿಸತೊಡಗಿ, ಈತ ಆತನನ್ನು ಹೊಡೆದು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಯಿತು. ಇಷ್ಟೆಲ್ಲಾ ಆದ ನಂತರವೂ ಕೆಲವೇ ತಿಂಗಳುಗಳಲ್ಲಿ ಇಬ್ಬರೂ ಒಂದಾದರು. ಅದನ್ನು ಇದೇ ಮಾಧ್ಯಮಗಳು ದಿನಗಟ್ಟಲೆ ಚರ್ಚಿಸಿದವು. ಹೀಗೆ ನಮ್ಮ ಕಣ್ಣ ಮುಂದೆ ಅನೇಕ ಘಟನೆಗಳು ನಡೆಯುತ್ತಿವೆ. ಇಷ್ಟೆಲ್ಲ ಅರಿವಿದ್ದು ಕೌಟುಂಬಿಕ ಘಟನೆಗಳ ವಿಷಯದಲ್ಲಿ ಮಾಧ್ಯಮಗಳು ಮೂಗು ತೂರಿಸುವುದು ಖಂಡಿತ ಅನಾಗರಿಕ ವರ್ತನೆ.

ಮನೆ ಜಗಳಗಳನ್ನು ಟಿವಿಯಲ್ಲಿ ಕುಳಿತು ಸಿನಿಮಾ ಧಾರವಾಹಿಯಂತೆ ನೋಡುವುದು, ಕುತೂಹಲದಿಂದ ಆ ಬಗ್ಗೆ ಚರ್ಚಿಸುವುದು ಮನುಷ್ಯ ಸಹಜ ಗುಣ. ಆದರೆ ಅದರ ಮೇಲೆ ನಿಯಂತ್ರಣ ಸಾಧಿಸಬೇಕಾದದ್ದು ಸಹ ಅಷ್ಟೇ ಅವಶ್ಯಕತೆ ಇದೆ. ಜನರು ಜಾಗೃತರಾಗಬೇಕು. ಕೌಟುಂಬಿಕ ವ್ಯವಸ್ಥೆಯಲ್ಲಿ ನಡೆಯುವ ಸಂಘರ್ಷಗಳು ವೈಯಕ್ತಿಕ ಎಂದು ಭಾವಿಸದೆ ಇದೊಂದು ಸಾರ್ವತ್ರಿಕ, ಸಾಮಾಜಿಕ ಸಮಸ್ಯೆ. ಇದನ್ನು ಆದಷ್ಟು ಪ್ರಬುದ್ಧತೆಯಿಂದ ನಿರ್ವಹಿಸಿದರೆ, ನಮ್ಮ ಪ್ರತಿಕ್ರಿಯೆಗಳು ಸಂಯಮದಿಂದ ಇದ್ದರೆ ಖಂಡಿತ ಕುಟುಂಬ ವ್ಯವಸ್ಥೆ ಹಿತಕರವಾಗಿರುತ್ತದೆ, ಸಹನೀಯವಾಗಿರುತ್ತದೆ.

ಯಾರ್ಯಾರಿಗೆ ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಸಂಯಮ ವಹಿಸಿ ಕೌಟುಂಬಿಕ ನೆಮ್ಮದಿಯನ್ನು ಕಾಪಾಡಿಕೊಳ್ಳಿ. ಇದು ಇಂದಿನ ಮಾನಸಿಕ ಮತ್ತು ದೈಹಿಕ ಆರೋಗ್ಯಕ್ಕೆ ತೀರಾ ಅನಿವಾರ್ಯ. ಇಲ್ಲದಿದ್ದರೆ ಒತ್ತಡದಿಂದ ನೀವೇ ಕುಸಿಯುವಿರಿ. ಪೊಲೀಸ್ ಮತ್ತು ನ್ಯಾಯಾಲಯಗಳು ನಿಮ್ಮ ಅಂತಿಮ ಆಯ್ಕೆಗಳಾಗಲಿ. ಹಿತೈಷಿಗಳ ಹೆಸರಿನಲ್ಲಿ ನಮ್ಮನ್ನು ಪ್ರಚೋದಿಸಿ, ತಪ್ಪು, ಕೆಟ್ಟ, ಅಪ್ರಬುದ್ಧ ಸಲಹೆ ನೀಡುವವರ ಬಗ್ಗೆ ಸದಾ ಎಚ್ಚರವಿರಲಿ......

ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ವಿವೇಕಾನಂದ. ಎಚ್. ಕೆ.9663750451....
9844013068......

# ಗ್ರಾಮೀಣ ಭಾಗದಲ್ಲಿ ನೀಲ್ಲದ ಜಾತಿ–ದೌರ್ಜನ್ಯ: ಸವರ್ಣೀರಿಂದ ದಲಿತರ ಭೂ ಕಬಳಿಕೆ ಯತ್ನ : ನ್ಯಾಯಕ್ಕಾಗಿ ಅಂಗಲಾಚಿದ ಮಹಿಳೆ

ತುಮಕೂರು: ಮಾನವ ಇಂದು ಅನ್ಯ ಗ್ರಹಗಳ ಮೇಲೆ ಜೀವನ ಕಟ್ಟಿಕೊಳ್ಳುವಷ್ಟು ಅಭಿವೃದ್ಧಿ ಪಥದತ್ತ ತಲುಪಿದ್ದರು ಗ್ರಾಮೀಣ ಭಾಗಗಳಲ್ಲಿ ಇಂದಿಗೂ ಜಾತಿ, ದೌರ್ಜನ್ಯ, ಹಲ್ಲೆ, ಭೂ ಕಬಳಿಕೆ ಪ್ರಕರಣಗಳು ಕಂಡು ಬರುತ್ತಿದ್ದು ಇದಕ್ಕೆ ಪೂರಕ ಎಂಬಂತೆ ತುಮಕೂರು ತಾಲೂಕಿನ ಗೂಳೂರು ಹೋಬಳಿ ವ್ಯಾಪ್ತಿಯ ಹ್ಯಾಂಡ್ ಪೋಸ್ಟ್ ಬಳಿ ಇರುವ ಕಾಳಿಂಗಯ್ಯನ ಪಾಳ್ಯದ ಪರಿಶಿಷ್ಟ ಪಂಗಡ ಸಮುದಾಯಕ್ಕೆ ಸೇರಿದ ಕುಟುಂಬದ ಮೇಲೆ ನಿರಂತರ ದಮಿಕ್ಕಿ, ದೌರ್ಜನ್ಯ, ಭೂ ಒತ್ತುವರಿ ಅನ್ಯಾಯ ನಡೆದಿದ್ದು ಕೊಡಲೇ ಇದಕ್ಕೆ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ಮದಕರಿ ನಾಯಕ ಸೇನೆಯ ಜಿಲ್ಲಾಧ್ಯಕ್ಷ ರಂಗನಾಥ್ ಅವರು ಒತ್ತಾಯಿಸಿದರು.

ತಾಲ್ಲೂಕಿನ ಕಾಳಿಂಗಯ್ಯನ ಪಾಳ್ಯದ ಪರಿಶಿಷ್ಟ ಪಂಗಡ ಸಮುದಾಯದ ನಾಗರತ್ನಮ್ಮ ಅವರ ಮನೆಗೆ ಭೇಟಿ ನೀಡಿ ನ್ಯಾಯಯುತ್ತವಾಗಿ ಭೂ ಒತ್ತುವರಿ ಬಿಡಿಸುವ ಭರವಸೆ ನೀಡಿದ ರಂಗನಾಥ ಅವರು 1963 ನೇ ಇಸವಿ ಯಿಂದಲೂ ಗ್ರಾಮದಲ್ಲಿ ಪರಿಶಿಷ್ಟ ಜನಾಂಗದ ಸಮುದಾಯದ ಏಕೈಕ ಕುಟುಂಬ ಒಂದು ನೆಲೆಗೊಂಡು ಕಾನೂನು ಪ್ರಕಾರ ಸ್ವಲ್ಪ ಜಮೀನನ್ನ ಹೊಂದಿದ್ದು ಇದನ್ನ ಸಹಿಸದ ಈ ಊರಿನ



ಸವರ್ಣೀಯರು ಜಾತಿ ಕುಮ್ಮಕಿನಿಂದ ಏಕೈಕ ನಾಯಕ ಕುಟುಂಬವನ್ನ ಊರು ಬಿಡಿಸುವ ಹುನ್ನಾರದಲ್ಲಿ ದೌರ್ಜನ್ಯದಿಂದ ನಡೆದುಕೊಳ್ಳುತ್ತಿದ್ದು ಗತಕಾಲದಿಂದಲೂ ಪೂಜಿಸುತ್ತಿದ್ದ ಗ್ರಾಮದೇವತೆಯ ಪೂಜಾರಿಕೆ ಕಿತ್ತುಕೊಂಡು ಹೀನವಾಗಿ ನಡೆಸಿಕೊಳ್ಳುತ್ತಿದ್ದಾರೆ ಹೀಗಾಗಿ ಕೂಡಲೇ ಕಂದಾಯ ಇಲಾಖೆ ಅಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಕಾನೂನು ಬದ್ಧವಾಗಿ ಇವರಿಗೆ ನ್ಯಾಯ ಕೊಡಿಸಬೇಕು ಇಲ್ಲದೆ ಹೋದರೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ನಾಯಕ ಸಮುದಾಯದ ಎಲ್ಲಾ ಮುಖಂಡರುಗಳು ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ದೌರ್ಜನ್ಯಕ್ಕೆ ಒಳಗಾದ ನಾಗರತ್ನಮ್ಮ ಅವರು ಮಾತನಾಡಿ ಅಮ್ಮ ತಾತ ಮುತ್ತಾತಂದರು ಅನುಭವಿಸುತ್ತಿದ್ದ ಆಸ್ತಿಯನ್ನು ಈ ಗ್ರಾಮದ ಎರಡು ಮೂರು ಕುಟುಂಬಗಳು ನಮ್ಮನ್ನ ಟಾರ್ಗೆಟ್ ಮಾಡಿ ಜಮೀನು ಕಬಳಿಸುವ ನಿಟ್ಟಿನಲ್ಲಿ ಕಂದಾಯ ಇಲಾಖೆಯ ಸರ್ವೆ ಅಧಿಕಾರಿಗಳು ಭೂಮಿ ಗುರುತಿಸಿದ್ದರು ನಿಮಗೆ ಇಲ್ಲಿ ಭೂಮಿ ಬಿಡುವುದಿಲ್ಲ ಬೇರೆಡೆಗೆ ನಿಮಗೆ ಭೂ ವ್ಯವಸ್ಥೆ ಮಾಡಿ ಕೊಡುವುದಾಗಿ ಯಮಾರಿಸುತ್ತಾ ವಂಚನೆ ಮಾಡುತ್ತಾರೆ ಭೂಮಿ ಹತ್ತಿರ ಬಂದಾಗ ಹೆದರಿಸುತ್ತಾರೆ ನಮ್ಮ ತಂದೆ ತಾಯಿ ಪೂಜಿಸಿತ್ತಿದ್ದ ಗ್ರಾಮ ದೇವತೆ ಪೂಜಾರಿಕೆ ಕಿತ್ತು ಕೊಂಡು ಅವಚ್ಯವಾಗಿ ನಿಂದಿಸುತ್ತಾರೆ ಈ ಬಗ್ಗೆ ಸಾಕಷ್ಟು ನ್ಯಾಯ ಪಂಚಾಯ್ತಿ ನಡೆದರು ನಮಗೆ ನ್ಯಾಯ ಸಿಕ್ಕಿಲ್ಲ ಎಂದು ತಮ್ಮ ಅಳಲು ತೋಡಿಕೊಂಡರು..

ನಾಗರತ್ನಮ್ಮ ಅವರ ಮಗ ಗಿರೀಶ್ ಮಾತನಾಡಿ ಗ್ರಾಮದಲ್ಲಿ ಸಮಾನತೆ ಎಂಬುದು ಮಾಯವಾಗಿದೆ ಭೂ ದಾಖಲೆಗಳನ್ನ ನಕಲಿಯಾಗಿ ಸೃಷ್ಟಿ ಮಾಡಿಕೊಂಡು ನಮ್ಮ ಭೂಮಿಗಳನ್ನು ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿದೆ ನಾಯಕ ಜನಾಂಗದ ಏಕೈಕ ಕುಟುಂಬ ಎನ್ನುವ ಕಾರಣಕ್ಕೆ ನಮ್ಮನ್ನ ಊರು ಬಿಡಿಸುವ ಸಲುವಾಗಿ ತೆರೆಮರೆಯ ಕಸರತ್ತು ನಡೆಯುತ್ತಿದೆ ಏಕಾಂಗಿಯಾಗಿರುವ ನಮ್ಮ ಕುಟುಂಬಕ್ಕೆ ಯಾರೊಬ್ಬರೂ ಸಹಕಾರ ಸಹಾಯ ಮಾಡುತ್ತಿಲ್ಲ ಈಗಾಗಿ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನಮಗೆ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿಕೊಂಡರು.

# ಹಳೆ ಜಾಗದಲ್ಲಿಯೇ ಸಂತೆ ಮುಂದುವರೆಸುವಂತೆ ಒತ್ತಾಯ



ಮಧುಗಿರಿ : ಪಟ್ಟಣದ ಅಭಿವೃದ್ಧಿಯ ಕಾರಣ ನೀಡಿ ಈ ಹಿಂದೆ ಸಂತೆ ನಡೆಯುತ್ತಿದ್ದ ಹಳೆಯ ಜಾಗದಲ್ಲಿಯೇ ಮುಂದುವರೆಸುವಂತೆ ಒತ್ತಾಯಿಸಿ ನೂರಾರು ಬೀದಿ ಬದಿ ವ್ಯಾಪಾರಿಗಳು ಸಂತೆಯನ್ನು ಮುಂದುವರೆಸುವಂತೆ ಪುರಸಭೆಯ ಮುಖ್ಯಾಧಿಕಾರಿ ಸುರೇಶ್ ಎಸ್ ಮನವಿ ಸಲ್ಲಿಸಿದರು.

ಪಟ್ಟಣದಲ್ಲಿ ಬೀದಿಬದಿಯಲ್ಲಿ ಹಲವಾರು ವರ್ಷಗಳಿಂದ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಿಗಳನ್ನು ಎಪಿಎಂಸಿ ಮಾರುಕಟ್ಟೆಗೆ ಸ್ಥಳಾಂತರಿಸಲು ಪುರಸಭೆಯ ಅಧಿಕಾರಿಗಳು ತಿಳಿಸಿದ್ದು ಅದರಂತೆ ಬುಧವಾರ ಬೆಳಿಗ್ಗೆ ಪಟ್ಟಣದಲ್ಲಿ ವ್ಯಾಪಾರ ಮಾಡಲು ಅವಕಾಶ ಮಾಡಿಕೊಡದ ಅಧಿಕಾರಿಗಳನ್ನು ಪ್ರಶ್ನಿಸಿದ್ದು ನಮ್ಮ ವೃತ್ತಿಯನ್ನು ಮುಂದುವರೆಸಲು ಪುರಸಭೆ ಅವಕಾಶ ನೀಡಬೇಕು.ಇದೇ ವೃತ್ತಿಯನ್ನು ನಂಬಿಕೊಂಡು ಬದುಕು ಕಟ್ಟಿಕೊಂಡಿದ್ದೇವೆ. ಈಗ ಏಕಾಏಕಿ ಸಂತೆಯ ಜೊತೆಗೆ ಬೀದಿಬದಿಯ ದಿನನಿತ್ಯದ ವ್ಯಾಪಾರವನ್ನೂ ಕೂಡ ಎಪಿಎಂಸಿ ಮಾರುಕಟ್ಟೆಗೆ ಸ್ಥಳಾಂತರಿಸಿರುವುದು ಸರಿಯಲ್ಲ.ಅಲ್ಲಿ ವ್ಯಾಪಾರವೂ ನಡೆಯುತ್ತಿಲ್ಲ.ಬಡ್ಡಿ ನೀಡಿ ಹಣ ತಂದು ಬಂಡವಾಳ ಹಾಕಿದ ವಸ್ತುಗಳು ಹಾಳಾಗುತ್ತಿದ್ದು ನಷ್ಟವಾಗುತ್ತಿದೆ. ಈಗಾಗಲೇ ಶಾಸಕ ಕೆ.ಎನ್.ರಾಜಣ್ಣ ನವರ ಸೂಚನೆಯ ಮೇರೆಗೆ ಬೀದಿಬದಿ ವ್ಯಾಪಾರಿಗಳಿಂದ ನೆಲದ ಸುಂಕ ವಸೂಲಿಗೆ ಮಾಡುತ್ತಿಲ್ಲಾ.ಈಗ ನಮ್ಮ ವ್ಯಾಪಾರವನ್ನು ಎಪಿಎಂಸಿಗೆ ಎತ್ತಂಗಡಿ ಮಾಡಿರುವುದನ್ನು ಕೂಡ ಮರುಪರಿಶೀಲಿಸಿ ಮೊದಲಿನಂತೆ ಶಂಕರ್ ಚಿತ್ರ ಮಂದಿರದ ಮುಂಭಾಗ ವ್ಯಾಪಾರ ಮಾಡಿಕೊಡಲು ಅವಕಾಶ ನೀಡುವಂತೆ ಒತ್ತಾಯಿಸಿದ್ದಾರೆ.

ಮುಖ್ಯಾಧಿಕಾರಿ ಸುರೇಶ್ ಮಾತನಾಡಿ ಇದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ಯಾರೂ ಹೆದರುವ ಅಗತ್ಯವಿಲ್ಲ.ಪಟ್ಟಣದಲ್ಲಿ ಸಾರ್ವಜನಿಕ ಜಾಗದಲ್ಲಿ ವ್ಯಾಪಾರ ಮಾಡುವವರಿಂದ ಕೆಲವರು ಸಾವಿರಾರು ರೂಗಳನ್ನು ಅಕ್ರಮವಾಗಿ ವಸೂಲಿ ಮಾಡುತ್ತಿರುವುದು ಗಮನಕ್ಕೆ ಬಂದಿದೆ.ಯಾರೂ ಅಪರಿಚಿತರಿಗೆ ಬಾಡಿಗೆ ಎಂದು ಹಣ ನೀಡಬಾರದು. ಹಾಗೆ ಬಾಡಿಗೆ ಕೇಳುವವರ ಬಗ್ಗೆ ನಮಗೆ ದೂರು ನೀಡಿದರೆ ಕ್ರಮವಹಿಸುತ್ತೇವೆ.ಈ ಅಕ್ರಮವನ್ನು ತಪ್ಪಿಸಿ ಪುರಸಭೆಯಿಂದ ನೀಡಲಾದ ಬೀದಿಬದಿ ವ್ಯಾಪಾರಿಗಳ ಗುರುತಿನ ಚೀಟಿ ಹೊಂದಿರುವವರಿಗೆ ಮುಂದೆ ಹಂತ ಹಂತವಾಗಿ ಸ್ಥಳದ ಅದ್ಯತೆ ನೀಡಲಾಗುವುದು ಅಲ್ಲಿಯವರೆಗೂ ಬುಧವಾರದಂದು ಯಾರೂ ಎಪಿಎಂಸಿ ಅವರಣದಿಂದ ಹೊರಗಡೆ ಬೀದಿಯಲ್ಲಿ ವ್ಯಾಪಾರ ಮಾಡುವಂತಿಲ್ಲ.ಪಟ್ಟಣದ ಅಭಿವೃದ್ದಿಗೆ ಎಲ್ಲರೂ ಸಹಕರಿಸಿ ಎಂದರು. ಇದೇ ವೇಳೆ ಬೀದಿಬದಿ ವ್ಯಾಪಾರಿಗಳ ತಾಲೂಕು ಗೌರವಾಧ್ಯಕ್ಷ ಚಿಕ್ಕ ರಂಗಯ್ಯ ಕಾರ್ಯದರ್ಶಿ ಶ್ರೀರಂಗಪ್ಪ ಕೃಷ್ಣ,ನಿರ್ದೇಶಕರಾದ ಹನುಮಂತರಾಜು,ರವಿ, ಮಂಜುನಾಥ್, ನಾಗರಾಜು,ವೆಂಕಟಮ್ಮ,ಶಿವಮ್ಮ, ಲಕ್ಷ್ಮಮ್ಮ,ಗಿರೀಶ್,ಕಾಂತರಾಜು,ಅಶೋಕ ಹಾಗೂ ಇತರರಿದ್ದರು.

> ಬೀದಿಬದಿ ವ್ಯಾಪಾರಿಗಳಿಗೆ ಶಾಸಕ ಕೆ.ಎನ್.ರಾಜಣ್ಣ ಮೊದಲಿನಿಂದಲೂ ನೆರವಾಗಿದ್ದಾರೆ.ಈಗಲೂ ನಮ್ಮ ನೆರವಿಗೆ ಅವರು ಬರಬೇಕು.ಬೀದಿಬದಿ ವ್ಯಾಪಾರಿಗಳ ಬದುಕಿಗೆ ನೆರವಾಗಬೇಕು.
> ಭದ್ರೇಗೌಡ, ಜಿಲ್ಲಾಧ್ಯಕ್ಷ,
> ಬೀದಿಬದಿ ವ್ಯಾಪಾರಿಗಳ ಸಂಘ,

# ಸಾಂಕ್ರಾಮಿಕ ರೋಗಗಳ ಮುಂಜಾಗ್ರತೆ ಬಗ್ಗೆ ಬೀದಿ ನಾಟಕ



ಹುಳಿಯಾರು: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ತುಮಕೂರು ಮತ್ತು ತಾಲೂಕು ಆರೋಗ್ಯ ಇಲಾಖೆ ಚಿಕ್ಕನಾಯಕನಹಳ್ಳಿ, ಪ್ರಾಥಮಿಕ ಆರೋಗ್ಯ ಕೇಂದ್ರ ಹುಳಿಯಾರು ಇವರ ಸಂಯುಕ್ತ ಆಶ್ರಯದಲ್ಲಿ ಭೂಮಿ ಗೀತಾ ಜಾನಪದ ಕಲಾತಂಡದರಿಂದ ಸಾಂಕ್ರಾಮಿಕ ರೋಗಗಳು. ಮುಂಜಾಗ್ರತಾ ಕ್ರಮಗಳ ಬಗ್ಗೆ. ಕ್ಷಯ ರೋಗ ನಿಯಂತ್ರಣ. ತಾಯಿ ಮತ್ತು ಮಗುವಿನ ಹಾರೈಕೆ ಪೌಷ್ಟಿಕ ಆಹಾರ ಬಳಕೆ. ಲಸಿಕ ಕಾರ್ಯಕ್ರಮ ಹಾಗೂ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಬೀದಿ ನಾಟಕದ ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

ಭೂಮಿಗೀತಾ ಜಾನಪದ ಕಲಾತಂಡದವರು ಸಾರ್ವಜನಿಕರಿಗೆ ಹುಳಿಯಾರಿನ ದುರ್ಗಮ್ಮನ ಗುಡಿ ಬೀದಿ, ಅಂಗನವಾಡಿ ಕೇಂದ್ರದ ಮುಂಬಾಗ ಅರಿವು ಮೂಡಿಸಿದರು. ಜಾನಪದ ಕಲಾತಂಡದ ಮುಖ್ಯಸ್ಥರಾದ ನಟರಾಜ್ ರವರು ತಮ್ಮ ಸಂಗಡಿಗರೊಂದಿಗೆ ಹಾಡು ಹಾಗೂ ರೂಪಕದ ಮೂಲಕ ಜನರಲ್ಲಿ ಅರಿವು ಮೂಡಿಸಿದರು.

ಈ ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯ ಇಲಾಖೆಯ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಸಿ.ವಿ.ವೆಂಕಟರಾಮಯ್ಯ, ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಬಿ.ಸಿ.ರೇಣುಕರಾಜು, ಚಂದು, ಸಮುದಾಯ ಆರೋಗ್ಯ ಅಧಿಕಾರಿ ಲಾವಣ್ಯ, ಆಶಾ ಕಾರ್ಯಕರ್ತೆಯರಾದ ಮೆಹಬೂಬ್ ಜಾನ್, ಮಂಜುಳಾ, ಅಂಗನವಾಡಿ ಕಾರ್ಯಕರ್ತೆಯಾದ ಸುಮಿತ್ರ, ಪಟ್ಟಣ ಪಂಚಾಯಿತಿಯ ನೌಕರರಾದ ರಾಘವೇಂದ್ರ ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು.

# ಆರೋಪ ಮಾಡಿದವ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು : ಸಿದ್ದಲಿಂಗಪ್ಪ



ತುರುವೇಕೆರೆ: ತಾಲೂಕಿನ ಸೊಸೈಟಿಗಳಿಂದ ಡಿಸಿಸಿ ಬ್ಯಾಂಕ್ ನಿರ್ದೇಶಕರು ಹಣ ಪಡೆಯುತ್ತಿದ್ದಾರೆ ಎಂದು ನನ್ನ ಮೇಲೆ ಆರೋಪ ಮಾಡಿದ್ದ ಮಾಜಿ ಅಧ್ಯಕ್ಷ ಪಂಚಾಕ್ಷರಿ ಹಾಗೂ ಇತರರ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಿಸಲಾಗುವುದು ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿದ್ದಲಿಂಗಪ್ಪ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ತಾಲೂಕಿನ ಸೊಸೈಟಿಗಳಲ್ಲಿ ಭ್ರಷ್ಟಚಾರ ನೆಡೆಯುತ್ತಿದೆ. ತೊರೆಮಾವಿನಹಳ್ಳಿ ಸೋಸೈಟಿಗಳಲ್ಲಿ ರೈತರ ಸಾಲ ನವೀಕರಣ ಮಾಡಲು ರೈತರಿಂದ ಹಣ ಪಡೆಯುತ್ತಿದ್ದಾರೆ, ಸೋಸೈಟಿಗಳಲ್ಲಿ ಠೇವಣಿ ಇಟ್ಟಿರುವ ಹಣವನ್ನು ವಾಯ್ದೆ ಮುಗಿದರೂ ಹಿಂದಿರಿಗಿಸುತ್ತಿಲ್ಲ ಎಂದು ಆರೋಪ ಮಾಡಿದ್ದರು.ಈ ಆರೋಪಗಳು ಸತ್ಯಕ್ಕೆ ದೂರ ಪಂಚಾಕ್ಷರಿ ಈ ಹಿಂದೆ 3 ವರ್ಷಗಳ ಕಾಲ ತೊರೆಮಾವಿನಹಳ್ಳಿ ಸೋಸೈಟಿ ಅಧ್ಯಕ್ಷರಾಗಿದ್ದಾಗ ಈ ಎಲ್ಲ ಸಮಸ್ಯೆಗಳನ್ನು ಬಗ್ಗೆ ಹರಿಸಬಹುದಾಗಿತ್ತು. ಅಧ್ಯಕ್ಷ ಕಾರ್ಯದರ್ಶಿಗಳಿಗೆ ಸಂಪೂರ್ಣ ಅಧಿಕಾರ ಇರುತ್ತೆ. ಅವರೇ ಸಾಲ ಕೊಟ್ಟಿದ್ದನು ಅವರೇ ಕಟ್ಟಿಸಿಲ್ಲ ತೋರೆಮಾವಿನಹಳ್ಳಿ ಸೋಸೈಟಿ ಸುಸ್ತಿತಿಯಲ್ಲಿ ಇದೆ. ನನ್ನ ಮೇಲೆ ಆರೋಪ ಮಾಡಲು ಯೂನಿಯನ್ ಬ್ಯಾಂಕ್ ಚುನಾವಣೆ ಕಾರಣವಾಗಿದೆ. ಮಾವಿನಹಳ್ಳಿ ವಿಜಯಕುಮಾರ್ ಬೇಡ ಎಂದು ಪಂಚಣ್ಣ ಹಠ ಹಿಡಿದಿದ್ದರು. ನಾನು ಹಿಂದುಳಿದ ವರ್ಗದ ವಿಜಯಕುಮಾರ್ ಮಾಡಬೇಕು ಎಂದು ಮಾಡಿದ್ದೇವೆ ಅಲ್ಲಿಂದ ದ್ವೇಷ ಸಾದಿಸಿಕೊಂಡು ಈಗ ಯಾವುದೇ ಆದಾರವಿಲ್ಲದೇ ಆರೋಪ ಮಾಡುತಿದ್ದಾರೆ. ಅದ್ದರಿಂದ ಅವರ ಮೇಲೆ ಕಾನೂನು ಹೋರಾಟ ಮಾಡಲಾಗುವುದು ಎಂದರು.

ನಾನು ನಿರ್ದೇಶಕರಾಗುವ ಮುನ್ನಾ ತಾಲೂಕಿನ ಸುಮಾರು ಸೋಸೈಟಿಗಳು ಅಸ್ತವ್ಯಸ್ಥವಾಗಿದ್ದವು ಮಾದಿಹಳ್ಳಿ ಸೋಸೈಟಿ ಸೂಪರ್ ಸೈಡ್ ಹಾಗಿದ್ದು ಈ ಹಿಂದಿನ ನಿರ್ದೇಶಕರ ಪಾಪದ ಕೂಸಾಗಿದೆ. ಅದನ್ನು ಸರಿಪಡಿಸಲು ಸಾದ್ಯವಾಗದಂತಾಗಿದೆ. ನನ್ನ ಕಾಲದಲ್ಲಿ ಎಲ್ಲ ರೈತರಿಗೂ ಸಾಲ ಸಿಗುವಂತೆ ಮಾಡಿದ್ದೇನೆ. ತಾಲೂಕಿನಲ್ಲಿ 42 ಕೋಟಿ ಇದ್ದ ಸಾಲ 88 ಕೋಟಿ ಸಾಲ ನೀಡುತ್ತಿದ್ದೇವೆ. ಹೊಸದಾಗಿ 8 ಕೋಟಿ ಸಾಲ ನೀಡುತ್ತಿದ್ದೇವೆ. ಜಿಲ್ಲೆಯಲ್ಲಿಯೇ ಮದುಗಿರಿ ಬಿಟ್ಟರೇ ತುರುವೇಕೆರೆ 2 ನೇ ಸ್ಥಾನದಲ್ಲಿದೇ ಎಂದು ಡಿಸಿಸಿ ಬ್ಯಾಂಕ್ ರಾಜಣ್ಣರೇ ತಿಳಿಸಿದ್ದಾರೆ. ನಾನು ಯಾವುದೇ ರೈತರಿಂದ ಹಣ ಪಡೆದು ರಾಜಕೀಯ ಮಾಡುವ ದುಸ್ತಿತಿಗೆ ಬಂದಿಲ್ಲ ಸೋಸೈಟಿಗಳಿಂದ ರೈತರಿಂದ ಹಣ ಪಡೆಯುತ್ತಿದ್ದಾರೆ ಎಂದು ಸಾಬೀತು ಮಾಡಿದರೆ ಈ ಕ್ಷಣದಲ್ಲಿಯೇ ನಾನೇ ಅದಿಕಾರ ತ್ಯಜಿಸುತ್ತೇನೆ. ವಾಚು, ಉಂಗುರ, ಕೈಚೈನ್ ಪಡೆಯುವ ನಿರ್ದೇಶಕನಲ್ಲ ಎಂದು ಮೂದಲಿಸಿದರು.ಇದರ ಹಿಂದೆ ಯಾರು ಇದ್ದಾರೆ ಎಂದು ಎಲ್ಲರಿಗೂ ಗೊತ್ತಿದೆ. ತಾಲೂಕಿನಲ್ಲಿ ಉತ್ತಮವಾಗಿ ಸೋಸೈಟಿಗಳು ನೆಡೆಯುತ್ತಿದ್ದು ಸೋಸೈಟಿ ಹಾಳು ಮಾಡಲು ಕೆಲವರನ್ನು ಎತ್ತಿ ಕಟ್ಟಿ ಪ್ರಸ್ ಮೀಟ್ ಮಾಡಿಸಿದ್ದಾರೆ. ಅಮಾಯಕರನ್ನು ಬಲಿಮಾಡುವ ಬದಲು ಅವರೇ ಸುದ್ದಿ ಗೋಷ್ಠಿ ಅಕ್ರಮ ಅವ್ಯವಹಾರಗಳನ್ನು ಜನರಿಗೆ ತಿಳಿಸಲಿ ಎಂದು ಈ ಹಿಂದಿನ ನಿರ್ಧೇಶಕರ ಹೆಸರು ಹೇಳದೆ ನೇರ ಸವಾಲು ಹಾಕಿದರು.

ಸುದ್ದಿ ಗೋಷ್ಟಿಯಲ್ಲಿ ಟಿಎಪಿಎಂಎಸ್ ಅಧ್ಯಕ್ಷ ರಮೇಶ್ ಗೌಡ, ಯೂನಿಯನ್ ಬ್ಯಾಂಕ್ ನಿರ್ದೇಶಕ ವಿಜಯಕುಮಾರ್, ತೊರೆಮಾವಿನಹಳ್ಳಿ ಸೋಸೈಟಿ ಅಧ್ಯಕ್ಷ ಓಂಕಾರ ಮೂರ್ತಿ, ಕಲ್ಕರೆ ಸೊಸೈಟಿ ಅಧ್ಯಕ್ಷ ಡಿ.ಪಿ.ರಾಜು, ಕೋಳಘಟ್ಟ ಅಧ್ಯಕ್ಷ ವೀರೇಂದ್ರಪಾಟೀಲ್ ಸೋಸೈಟಿ ಮುಖಂಡರಾದ ಯದುಕುಮಾರ್, ಪ್ರಸನ್ನಕುಮಾರ್, ನಂಜುಂಡಪ್ಪ, ದೊರೆರಾಜು, ಉದಯಕುಮಾರ್, ರಾಜಣ್ಣ, ನಿಜಗುಣ, ಶಶಿಕುಮಾರ್, ಯಜಮಾನ್ ಮಹೇಶ್ ಬೋರೇಗೌಡ, ಶಿವಕುಮಾರ್ ಸೇರಿದಂತೆ ಇತರರು ಇದ್ದರು.

27ಪೋಟೋ ಶಿರ್ಷಿಕೆ01 ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿದ್ದಲಿಂಗಪ್ಪ ಮಾತನಾಡಿದರು.

# ಕಾಪು ಕಡಲತೀರದಲ್ಲಿ ರಥಸಪ್ತಮಿ



ಶಿರಾ : ಶಿರಾ ನಗರದ ಸಿರಿಯೋಗ ಕೇಂದ್ರದ ಯೋಗ ಗುರುಗಳಾದ ಯೋಗಶ್ರೀ ಮಂಜುನಾಥ ಹಾಗೂ ಯೋಗ ತಂಡವು ಉಡುಪಿ ಜಿಲ್ಲೆಯ ಕಾಪು ಕಡಲತೀರದಲ್ಲಿ ರಥ ಸಪ್ತಮಿಯನ್ನು ವಿಶೇಷವಾಗಿ ಆಚರಿಸಲಾಯಿತು.

ಯೋಗ ಗುರು ಮಂಜುನಾಥ್ ಮಾತನಾಡಿ ಈ ದಿನ ಸೂರ್ಯ ರಥವೇರಿ ಬರುತ್ತಾನೆ ಸೂರ್ಯರಶ್ಮಿಯು ಜ್ಞಾನ ಮತ್ತು ಪ್ರಖರತೆಯ ಸಂಕೇತ, ಸೂರ್ಯನ ಆಶೀರ್ವಾದ ಪಡೆಯಲು ರಥ ಸಪ್ತಮಿಯಂದು ಸೂರ್ಯನಿಗೆ ಅರ್ಘ್ಯ ಕೊಡುವುದು, ಸಮುದ್ರ,ನದಿ ಸ್ನಾನ ಮಾಡುವುದು ವಿಶೇಷ. ಸೂರ್ಯನಂತಹ ತೇಜಸ್ಸು ಪ್ರಾಪ್ತಿಯಾಗಲು ಸೂರ್ಯದೇವನ ಉಪಾಸನೆ ಮಾಡಬೇಕು. ಹಾಗೂ ಸನಾತನ ಧರ್ಮದ ಸಂಪ್ರದಾಯ, ಹಿರಿಮೆ ಮತ್ತು ಘನತೆಯನ್ನು ಉಳಿಸುವ ಕೆಲಸ ಯೋಗ ಬಂಧುಗಳಿಂದ ಆಗಬೇಕೆಂದು ತಿಳಿಸಿದರು

ಈ ಕಾರ್ಯಕ್ರಮದಲ್ಲಿ ಸಿರಿಯೋಗದ ಯೋಗಿಗಳು ಕಡಲತೀರ ಕಾಪುವಿನಲ್ಲಿ ಅಗ್ನಿಹೋತ್ರ,ಸಮುದ್ರ ಸ್ನಾನ ಮತ್ತು ಸೂರ್ಯನಮಸ್ಕಾರ ಪ್ರಾಣಾಯಾಮ ಧ್ಯಾನ ಮಾಡುವುದರ ಮೂಲಕ ರಥ ಸಪ್ತಮಿಯನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಸಿರಿಯೋಗ ಸಂವರ್ಧನಾ ಟ್ರಸ್ಟ್ ನ ಉಪಾಧ್ಯಕ್ಷ ರಮೇಶ್ ರಾವ್, ಸದಸ್ಯರಾದ ಕೈಲಾಶ್ ಬಾಬು, ವಸಂತ್ ಕುಮಾರ್,ಮಧು, ವಿನೋದ್ ಕುಮಾರ್,ಸನತ್ ಕುಮಾರ್ , ಮಂಜುನಾಥ್ ಮಾತೆಯರಾದ ಸುಧಾ, ರೂಪ, ಪದ್ಮ, ಶಿಲ್ಪ, ರಾಧಾ ,ವಿಜಯಲಕ್ಷ್ಮಿ ಹೇಮಕ್ಕ ಹಾಗೂ ಯೋಗ ಬಂಧುಗಳು ಭಾಗವಹಿಸಿದ್ದರು.

# ಫೆ.1ರಂದು ಎನ್.ಎಂ.ಎಂ.ಎಸ್. ಪರೀಕ್ಷೆ

ತುಮಕೂರು: ತುಮಕೂರು ನಗರದ 5 ಪರೀಕ್ಷಾ ಕೇಂದ್ರಗಳಲ್ಲಿ ಫೆಬ್ರವರಿ 1ರಂದು ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ ಹಾಗೂ ಮಧ್ಯಾಹ್ನ 2.30 ರಿಂದ 3.30 ಗಂಟೆಯವರೆಗೆ ಎನ್.ಎಂ.ಎಂ.ಎಸ್. ಪರೀಕ್ಷೆ ನಡೆಯಲಿದೆ.

ತುಮಕೂರಿನ ಕೆ.ಪಿ.ಎನ್. ಎಂಪ್ರೆಸ್(ಪ್ರೌಢಶಾಲಾ ವಿಭಾಗ), ಗಾಂಧಿನಗರದ ಸೆಂಟ್ ಮೇರಿಸ್ ಬಾಲಕಿಯರ ಪ್ರೌಢಶಾಲೆ, ಬಿ.ಹೆಚ್. ರಸ್ತೆಯಲ್ಲಿರುವ ಆರ್ಯನ್ ಪ್ರೌಢಶಾಲೆ, ಹೊರಪೇಟೆಯ ಬಾಪೂಜಿ ಪ.ಪೂ.ಕಾಲೇಜು(ಪ್ರೌಢಶಾಲಾ ವಿಭಾಗ) ಹಾಗೂ ಬಿ.ಹೆಚ್. ರಸ್ತೆಯಲ್ಲಿರುವ ಶ್ರೀ ಸಿದ್ಧಗಂಗಾ ಸಂ.ಪ.ಪೂ.ಕಾಲೇಜಿ(ಪ್ರೌಢಶಾಲಾ ವಿಭಾಗ)ನ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ಆಯಾ ಪ್ರೌಢಶಾಲೆಗಳಿಂದ ಪಡೆದು ಪರೀಕ್ಷಾ ದಿನಾಂಕದಂದು ನಿಗಧಿಪಡಿಸಿರುವ ಪರೀಕ್ಷಾ ಕೇಂದ್ರಗಳಿಗೆ ಅರ್ಧ ಗಂಟೆ ಮುಂಚಿತವಾಗಿ ಹಾಜರಾಗಬೇಕೆಂದು ಶಾಲಾ ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಿಂಡೀ ಉತ್ಸವ ಆಚರಣೆ



ತಿಪಟೂರು : ನಗರದ ಪಾಂಡುರಂಗಸ್ವಾಮಿ ದೇವಸ್ಥಾನದ ವತಿಯಿಂದ ಹಾಗೂ ಭಾಮಸಾರ ಕ್ಷತ್ರಿಯ ದೈವ ಮಂಡಳಿ ಮತ್ತು ಭಜನಾ ಮಂಡಳಿಯ ಸಹಯೋಗದಲ್ಲಿ 45ನೇ ವರ್ಷದ ದಿಂಡೀ ಉತ್ಸವವನ್ನು ಆಚರಿಸಲಾಯಿತು. ನಗರದ ಪ್ರಮುಖ ರಾಜಬೀದಿಗಳಲ್ಲಿ ಪಾಂಡುರಂಗ ಸ್ವಾಮಿ ಹಾಗೂ ರುಕ್ಮಿಣಿ ದೇವಿಯ ಉತ್ಸವ ಮೂರ್ತಿಗಳ ಭವ್ಯ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಸಮಾಜ ಬಾಂಧವರು ಸೇರಿದಂತೆ ಅಪಾರ ಸಂಖ್ಯೆಯ ಭಕ್ತರು ಪಾಲ್ಗೊಂಡಿದ್ದರು.ಉತ್ಸವದ ಅಂಗವಾಗಿ ಫಂಡರಿ ಸಂಪ್ರದಾಯದ ಕನ್ನಡದ ಕೀರ್ತನೆಗಳನ್ನು ಭಜನಾ ತಂಡದವರು ಹಾಡಿ ಭಕ್ತಿಭಾವ ಮೂಡಿಸಿದರು. ದೇವಸ್ಥಾನದಲ್ಲಿ ವಿಶೇಷವಾಗಿ ಬೆಣ್ಣೆ ಅಲಂಕಾರ ಹಾಗೂ ಕನ್ನಡ ಕೀರ್ತನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೆರವಣಿಗೆಯ ನಂತರ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಮೂರು ದಿನಗಳ ಕಾಲ ನಡೆದ ದಿಂಡಿ ಉತ್ಸವ ಕಾರ್ಯಕ್ರಮವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.

ಸೂರ್ಯ ಪ್ರಗತಿ
ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ
ಸಂಪರ್ಕಿಸಿ: 9901010109

# ಮೊಬೈಲ್ ಕ್ಯಾಂಟಿನ್ ನಡೆಸಲು ಸಹಾಯಧನ : ಆಕ್ಷೇಪಣೆಗೆ ಅವಕಾಶ

ತುಮಕೂರು: ಪ್ರವಾಸೋದ್ಯಮ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು 5ಲಕ್ಷ ರೂ.ಗಳ ಸಹಾಯಧನ ನೀಡುವ ಸಂಬಂಧ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳು ಸ್ವೀಕೃತವಾದ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅನುಮೋದಿಸಿದ್ದು, ಅನುಮೋದನೆಗೊಂಡಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಅರ್ಹತಾ ಪಟ್ಟಿ, ಅನರ್ಹತಾ ಪಟ್ಟಿ, ಅಂತಿಮ ಪಟ್ಟಿ ಹಾಗೂ ಕಾಯ್ದಿರಿಸಿರುವ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಈ ಪಟ್ಟಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಫೆಬ್ರವರಿ 2ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ತುಮಕೂರು ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘದ ರಜತ ಮಹೋತ್ಸವ ಸಮಾರಂಭ




ತಿಪಟೂರು: ನಗರದ ಶ್ರೀ ಉದಯರವಿ ಸೌಹಾರ್ದ ಪತ್ತಿನ ಸಹಕಾರಿ ಸಂಘವು 25ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ್ದು ಈ ಶುಭಸಂದರ್ಭದ ನೆನಪಿಗಾಗಿ ಫೆ.1 ಭಾನುವಾರ ರಜತ ಮಹೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿದೆ ಎಂದು ಸಹಕಾರಿ ಸಂಘದ ಅಧ್ಯಕ್ಷ ಕೆ.ಎಂ. ರಾಜಣ್ಣ ತಿಳಿಸಿದರು.

ನಗರದ ಉದಯರವಿ ಸಹಕಾರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಫೆ.1ರಂದು ನಗರದ ಕಂಚಾಘಟ್ಟ ರಸ್ತೆಯ ಜಿ.ಕೆ.ಬಾಬು ಲೇಔಟ್‌ನ ಉದಯರವಿ ಮಂಟಪದಲ್ಲಿ ರಜತ ಮಹೋತ್ಸವ ಸಮಾರಂಭ ಆಯೋಜಿಸಲಾಗಿದ್ದು ಶಾಸಕ ಕೆ.ಷಡಕ್ಷರಿ ಸಮಾರಂಭವನ್ನು ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಬಿ.ಸಿ.ನಾಗೇಶ್, ನಿವೃತ್ತ ಎಸಿಪಿ ಲೋಕೇಶ್ವರ, ಜೆಡಿಎಸ್ ಮುಖಂಡ ಕೆ.ಟಿ. ಶಾಂತಕುಮಾರ್, ಸಂಯುಕ್ತ ಸಹಕಾರಿಯ ರಾಜ್ಯಾಧ್ಯಕ್ಷ ಜಿ.ನಂಜನಗೌಡ, ನಿರ್ದೇಶಕ ಕೃಷ್ಣಾರೆಡ್ಡಿ.ಬಿ.ಹೆಚ್., ಸಿ.ಪಿ.ವಿಜಯ್, ಸಹಕಾರ ಸಂಘಗಳ ಸಹಾಯಕ ನಿಬಂಧಕ ಕೆ.ಎಸ್.ಹರೀಶ್ ಕುಮಾರ್, ಲೆಕ್ಕಪರಿಶೋಧಕ ಎಸ್,ಧನ್ಯಕುಮಾರ್ ಭಾಗವಹಿಸಲಿದ್ದಾರೆ. ತುಮುಲ್ ನಿರ್ದೇಶಕ ಮಾದೀಹಳ್ಳಿ ಪ್ರಕಾಶ್, ಮಾಜಿ ನಗರಸಭಾಧ್ಯಕ್ಷ ಟಿ.ಎನ್.ಪ್ರಕಾಶ್ ಸೇರಿದಂತೆ 12ಜನ ಸಹಕಾರಿ ಸೇವೆಯಲ್ಲಿರುವ 12ಜನರನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ ಎಂದು ಅಧ್ಯಕ್ಷ ಕೆ.ಎಂ.ರಾಜಣ್ಣ ತಿಳಿಸಿದರು.

1959ರಲ್ಲಿ ಕೇವಲ 156 ಸದಸ್ಯರು ಹಾಗೂ 2ಲಕ್ಷ ಬಂಡವಾಳದೊಂದಿಗೆ ಎಂ.ಎಸ್.ಸೋಮಶೇಖರ್ ಅವರು ಶಂಕರಮೂರ್ತಿಯವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಿದ ಸಂಸ್ಥೆಯು ಪಾರದರ್ಶಕವಾಗಿ ಕಾರ್ಯಚಟುವಟಿಕೆಗಳನ್ನು ನಡೆಸಿ ಪ್ರತಿ ವರ್ಷವೂ ಆರ್ಥಿಕವಾಗಿ ಅಭಿವೃದ್ಧಿ ಹೊಂದುತ್ತಾ ಬಂದಿದ್ದು 2025ರಲ್ಲಿ 6621 ಶೇರುದಾರರನ್ನು ಹೊಂದಿ 401ಕೋಟಿರೂ ಠೇವಣಿ ಸಂಗ್ರಹಿಸಿತು. 432ಕೋಟಿ ರೂಗಳ ದುಡಿಯುವ ಬಂಡವಾಳವನ್ನೂ ಹೊಂದಿದ ಸಹಕಾರಿಯು 4.35ಕೋಟಿ ರೂಗಳ ನಿವ್ವಳ ಲಾಭ ಸಂಪಾದಿಸಿ ಎಲ್ಲ ಶೇರುದಾರರಿಗೆ ಕಳೆದ ವರ್ಷ ಶೇ20ರಷ್ಟು ಡಿವಿಡೆಂಟ್ ನೀಡಿ ದಾಖಲೆ ಬರೆದಿದೆ. ಉದಯರವಿ ಸಹಕಾರ ಸಂಘವು ಬೆಂಗಳೂರು ವಿಭಾಗದ ಸಹಕಾರಿಗಳಲ್ಲಿ ಎರಡನೇ ಸ್ಥಾನದಲ್ಲಿದ್ದು ತುಮಕೂರು ಜಿಲ್ಲೆಯಲ್ಲಿಯೇ ಪ್ರಥಮ ಸ್ಥಾನ ಪಡೆದಿದೆ. ಇದಕ್ಕೆ ಪ್ರಮುಖ ಕಾರಣ ಸಂಸ್ಥಾಪಕ ಎಂ.ಎಸ್.ಸೋಮಶೇಖರ್ ಶ್ರಮದ ಪ್ರತಿಫಲವಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಹೆಚ್.ಸೋಮಶೇಖರಯ್ಯ, ವ್ಯವಸ್ಥಾಪಕ ಟಿ.ಸಿ.ರವಿ, ನಿರ್ದೇಶಕರಾದ ಅಣ್ಣಪ್ಪ, ಟಿ.ಬಿ.ಉಮಾಪತಿ, ಎಸ್.ಎಸ್. ಕುಮಾರಸ್ವಾಮಿ, ಕೆ.ಜಯದೇವಮೂರ್ತಿ, ಟಿ.ಆರ್.ತ್ರಿಲೋಚನ, ಸಿ.ದಯಾನಂದ, ಎನ್.ಎಂ.ನಾಗಲಾಂಬಿಕ, ಟಿ.ಎಸ್. ಸುಮಿತ್ರ, ಬಿ.ಬೋರಯ್ಯ,, ಹೆಚ್. ಮಾರುತಿ, ಲಿಂಗರಾಜು, ಸಿದ್ದನಚಿಜಪ್ಪ, ಸಿದ್ದೇಶ್, ರವಿಚಂದ್ರ ಇತರರು ಉಪಸ್ಥಿತರಿದ್ದರು.

# ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆ : 2 ಅಪರಿಚಿತ ಶವ ಪತ್ತೆ

ತುಮಕೂರು: ತುಮಕೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 2 ಅಪರಿಚಿತ ವ್ಯಕ್ತಿಗಳ ಶವ ಪತ್ತೆಯಾಗಿರುವ ಬಗ್ಗೆ ಪ್ರತ್ಯೇಕ ದೂರು ದಾಖಲಾಗಿದ್ದು, ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ.

ಪ್ರಕರಣ–1: ಕುಣಿಗಲ್ ಜಂಕ್ಷನ್ ಅಲಂಕಾರ್ ಡಾಬಾದ ಹಿಂಭಾಗ ಮರಳೂರು ಕೆರೆಯ ನೀರಿನಲ್ಲಿ ಜನವರಿ 15ರಂದು ಸುಮಾರು 60 ವರ್ಷದ ಅಪರಿಚಿತ ವ್ಯಕ್ತಿಯ ಶವವೊಂದು ಪತ್ತೆಯಾಗಿದೆ. ಮೃತನು 5.6 ಅಡಿ ಎತ್ತರ, ಗೋಧಿ ಮೈಬಣ್ಣ, ದುಂಡು ಮುಖ, ದೃಢಕಾಯ ಶರೀರ ಹೊಂದಿದ್ದು, ಈತನ ಮೈಮೇಲೆ ತುಂಬು ತೋಳಿನ ಅಂಗಿ ಹಾಗೂ ಚೌಕಳಿಯಿರುವ ಹಸಿರು ಬಣ್ಣದ ಲುಂಗಿ ಇರುತ್ತದೆ.

ಪ್ರಕರಣ–1: ಯಲ್ಲಾಪುರ ಅರಳಿಮರದ ಬಳಿ ಇರುವ ಮಾರುತಿ ಫ್ಲೋರ್ ಮಿಲ್‌ನ ಎದುರಿನ ಚರಂಡಿಯಲ್ಲಿ 2025ರ ಡಿಸೆಂಬರ್ 31ರಂದು ಸುಮಾರು 60 ವರ್ಷದ ಅಪರಿಚಿತ ವ್ಯಕ್ತಿಯ ಶವವೊಂದು ಪತ್ತೆಯಾಗಿದೆ. ಮೃತನು 5.5 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲು ಮುಖ, ಸಾಧಾರಣ ಮೈಕಟ್ಟು ಹೊಂದಿದ್ದು, ಈತನ ಮೈಮೇಲೆ ಕೆಂಪು ಬಣ್ಣದ ತುಂಬು ತೋಳಿನ ಅಂಗಿ ಹಾಗೂ ಕಪ್ಪು ಪ್ಯಾಂಟ್ ಇರುತ್ತದೆ.

ಮೃತರ ವಾರಸುದಾರರು ಯಾರಾದರೂ ಇದ್ದಲ್ಲಿ ದೂ.ವಾ.ಸಂ. 0816–2278381, ಮೊ.ಸಂ. 9480802948–31ನ್ನು ಸಂಪರ್ಕಿಸಬೇಕೆಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . SUB EDITOR- A.S.BANUPRAKASH CONTACT : 9901010109 GMAIL: suryapragathi2021@gmail.com.